10. ಮಂತ್ರಿಗಳ ಹೇಳಿಕೆ

ವಿಷಯ:– ಪಡಿತರ ವಿತರಣೆ (ಅ) ಮತ್ತು ಕಾರ್ಡುಗಳ ಪುನರ್ ಸಮೀಕ್ಷೆ ಕಾರ್ಯಕ್ರಮದ ಬಗ್ಗೆ.

ಶ್ರೀ ಹೆಚ್. ಎಸ್. ಮಹಾದೇವಪ್ರಸಾದ್ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು):– ಅದು ಯಾವ ನಿಯಮದಲ್ಲಿ ತೆಗೆದುಕೊಂಡಿದ್ದಾರೆಂದು ಸರಿಯಾಗಿ ಗೊತ್ತಿಲ್ಲ. ಆದ್ದರಿಂದ ಕಾಪಿಗಳು ಮಾಡಿಲ್ಲ. ಹಾಗೆಯೇ ಉತ್ತರ ಕೊಡುತ್ತೇನೆ. ಮಾನ್ಯ ಅಧ್ಯಕ್ಷರೆ, ತಾವು ಏನು ನೆನ್ನೆ ಸದನದಲ್ಲಿ ವಿರೋಧ ಪಕ್ಷದ ನಾಯಕರು ಮತ್ತು ಇತರ ಗೌರವಾನ್ವಿತ ಸದಸ್ಯರು ಪಡಿತರ ವಿತರಣೆಯ ಬಗ್ಗೆ ಕಾರ್ಡುಗಳ ಪುನರ್ ಸಮೀಕ್ಷೆ ಕಾರ್ಯಕ್ರಮದ ಬಗ್ಗೆ ಈ ತಿಂಗಳು 28ನೇ ತಾರೀಖಿನಂದು ಏನು ಪುನರ್ ಸಮೀಕ್ಷೆ ಕಾರ್ಯ ಮನೆ ಮನೆಗೆ ತೆರಳಿ ಮಾಡತಕ್ಕಂತಹ ಕಾರ್ಯದ ಬಗ್ಗೆ ಕೆಲವು ಮಾನದಂಡಗಳನ್ನು ವಿಧಿಸಿರುವ ಬಗ್ಗೆ ಕೆಲವು ಬದಲಾವಣೆಗಳನ್ನು ಮಾಡಬೇಕು ಎಂದು ಪ್ರಸ್ತಾಪ ಮಾಡಿ ಸರ್ಕಾರದ ಗಮನ ಸೆಳೆದಿದ್ದಾರೆ. ಆ ಒಂದು ವಿಚಾರವಾಗಿ ಈ ಹೇಳಿಕೆಯನ್ನು ತಮ್ಮ ಮುಂದೆ ಮಂಡಿಸುತ್ತಿದ್ದೇನೆ.

ರಾಜ್ಯದಲ್ಲಿ ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳನ್ನು ಗುರುತಿಸಿ ಪಡಿತರ ಚೀಟಿಯನ್ನು ಕೊಡುವಲ್ಲಿ ಕೆಲವು ಅರ್ಹ ಕುಟುಂಬಗಳನ್ನು ಕೈಬಿಟ್ಟಿದ್ದು ಅನರ್ಹ ಕುಟುಂಬಗಳು ಪಡಿತರ ಚೀಟಿಯನ್ನು ಹೊಂದಿರುವುದಾಗಿ ಜನಪ್ರತಿನಿಧಿಗಳಿಂದ/ ಸಾರ್ವಜನಿಕರಿಂದ ದೂರುಗಳು ಬಂದಿರುವುದರನ್ನು ಗಮನಿಸಿ ಅನರ್ಹ ಕುಟುಂಬಗಳು ಹೊಂದಿದ ಪಡಿತರ ಚೀಟಿಗಳನ್ನು ರದ್ದುಪಡಿಸಿ ಅರ್ಹ ಕುಟುಂಬಗಳಿಗೆ ಪಡಿತರ ಚೀಟಿಗಳನ್ನು ನೀಡಲು ಗ್ರಾಮ ಮತ್ತು ಪಟ್ಟಣ ಪ್ರದೇಶಗಳಲ್ಲಿ ಪಾರದರ್ಶಕ ರೀತಿಯಲ್ಲಿ ಪುನರ್ ಮನೆ ಮನೆ ಸಮೀಕ್ಷೆ ನಡೆಸಲು ಸರ್ಕಾರಿ ಆದೇಶ ಸಂಖ್ಯೆ: ಆನಾಸ: 114: ಡಿಆರ್ಎ: 2004 ದಿನಾಂಕ: 10.1.2005 ರಂದು ಹೊರಡಿಸಲಾಗಿರುತ್ತದೆ.

ಈ ಪುನರ್ ಸಮೀಕ್ಷಾ ಕಾರ್ಯವನ್ನು ಕಂದಾಯ/ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್/ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ ಮತ್ತು ನಗರಾಭಿವೃದ್ಧಿ ಇಲಾಖೆ ಅಧಿಕಾರಿಗಳು ಒಟ್ಟುಗೂಡಿ ಮಾಡಬೇಕಾಗಿದ್ದು ಇವರುಗಳೊಂದಿಗೆ ಗ್ರಾಮದ ಮಹಿಳಾ ಸ್ವಸಹಾಯಕ ಸಂಘ ಹಾಗೂ ರಚನಾತ್ಮಕ ಕಾರ್ಯಗಳಲ್ಲಿ ತೊಡಗಿರುವ ಇತರೆ ಗ್ರಾಮೀಣ ಮಟ್ಟದ ಸಂಘಸಂಸ್ಥೆಗಳ ಸದಸ್ಯರನ್ನು ಒಳಗೊಂಡ ತಂಡವನ್ನು ರಚಿಸಲು ಜಿಲ್ಲಾಧಿಕಾರಿಗಳಿಗೆ ನಿರ್ದೇಶಿಸಲಾಗಿದೆ.

ಅನರ್ಹರನ್ನು ಗುರುಸಿಸುವ ಸಂಬಂಧ ಈ ಕೆಳಕಂಡ ಮಾನದಂಡಗಳನ್ನು ಅನುಸರಿಸಲು ತಿಳಿಸಲಾಗಿದೆ.

1. ಎರಡು ಹೆಕ್ಟೇರ್ ಅಥವಾ ಅದಕ್ಕಿಂತ ಹೆಚ್ಚು ಭೂಮಿ ಹೊಂದಿರುವವರು.
2. ದೂರವಾಣಿ ಮತ್ತು ಸೆಲ್‌ಫೋನ್ ಹೊಂದಿರುವವರು

3. ಸ್ವಂತವಾಗಿ ಯಾರೇದೆ/ಡೀಸೆಲ್/ಪೆಟ್ರೋಲ್ ಇಂಧನ ಬಳಸುವ ವಾಹನ ಹೊಂದಿರುವವರು;
4. ಬ್ಯಾಂಕ್/ಸಹಕಾರಿ ಸಂಘಗಳಲಿ 1.00 ಲಕ್ಷಕ್ಕೂ ಮೇಲ್ಪಟ್ಟು ಸಾಲ ಪಡೆದಿರುವವರು;
5. ಒಂದು ಬೋರ್‌ವೆಲ್ ಹೊಂದಿ, ನೀರಾವರಿ ಸೌಕರ್ಯ ಪಡೆಯುತ್ತಿರುವವರು;
6. ತಿಂಗಳಿಗೆ ರೂ.1,000/–ಕ್ಕೆ ಕಡಿಮೆ ಇಲ್ಲದೆ ವೇತನ ಪಡೆಯುವ ಸರ್ಕಾರಿ/ಸರ್ಕಾರೇತರ ಖಾಸಗಿ ಸಿಬ್ಬಂದಿಗಳು:
7. ಆದಾಯ ತೆರಿಗೆ ಪಾವತಿಸುವವರು:
8. Registered contractors, APMC Traders/Commission Agents Dealers in Seeds/Fertilizers etc.,
9. ಒಟ್ಟಾರೆ ಸಮೀಕ್ಷೆ ಮಾಡುವ ಸಂದರ್ಭದಲ್ಲಿ ಕುಟುಂಬದ ಜೀವನ ಮಟ್ಟವನ್ನು ಕೂಡ ಸಮೀಕ್ಷೆ ಮಾಡಿ ನಿರ್ಣಯಿಸುವುದು.

ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳೆಂದು ಗುರುತಿಸಲು ಇರುವ ಮಾರ್ಗಸೂಚಿ ಅನುಸಾರ ಗ್ರಾಮೀಣ ಪ್ರದೇಶದಲ್ಲಿ ವಾಸಿಸುವ ಕುಟುಂಬಗಳ ವಾರ್ಷಿಕ ಆದಾಯವು ರೂ.12,000/– ಕ್ಕಿಂತ ಕಡಿಮೆ ಹಾಗೂ ಪಟ್ಟಣ ಪ್ರದೇಶಗಳಲ್ಲಿ ರೂ.17,000/– ಕ್ಕಿಂತ ಕಡಿಮೆ ಇರಬೇಕು. ನಿಗದಿಪಡಿಸಲಾಗಿರುವ ಮೇಲೆ ವಿವರಿಸಿದ ಮಾನದಂಡಗಳು ಈ ಮಾರ್ಗಸೂಚಿಗೆ ಅನುಗುಣವಾಗಿರುತ್ತದೆ. ಸಮೀಕ್ಷಾ ಒಟ್ಟಾರೆ ಕುಟುಂಬ ಸ್ಥಿತಿ–ಗತಿ ಮತ್ತು ಜೀವನ ಮಟ್ಟವನ್ನು ನಿರ್ಧರಿಸುವ ವೇಳೆಯಲ್ಲಿ ಕುಟುಂಬದ ಜೀವನ ಮಟ್ಟವನ್ನು ಸಮೇಕ್ಷೆ ಮಾಡಿ ವಾಸಿಸುತ್ತಿರುವ ಪರಿಸರವನ್ನು ಸಹ ಗಣನೆಗೆ ತೆಗೆದುಕೊಮಡು ನಿರ್ಣಯಿಸಬೇಕೆಂದು ಸ್ಪಷ್ಟ ನಿರ್ದೇಶನ ನೀಡಲಾಗಿರುತ್ತದೆ. ಈ ಮಾನದಂಡದಿಂದ ಕುಟುಂಬ ವಾಸ್ತವಿಕ ಪರಿಸ್ಥಿತಿಯನ್ನು ಗಮನದಲಗಲಿಟ್ಟುಕೊಂಡು ಸಮೀಕ್ಷಾ ತಂಡವು ಪಡಿತರ ಚೀಟಿ ನೀಡಲು ಶಿಫಾರಸ್ಸು ಮಾಡುವುದು. ಇದರಿಂದಾಗಿ ರಜ್ಯದಲ್ಲಿರುವ ಯಾವುದೇ ಅರ್ಹ ಕುಟುಂಬಗಳಿಗೆ ಅನ್ಯಾಯವಾಗಲು ಅವಕಾಸವಿರುವುದಿಲ್ಲ.

ವಿಭಾಗ ಮಟ್ಟದ ತರಬೇತಿ ಶಿಬಿರಗಳಲ್ಲಿ ಈ ಮಾನದಂಡಗಳ ಬಗ್ಗೆ ಕೂಲಂಕಶವಾಗಿ ಚರ್ಚಿಸಿ ಸ್ಪಷ್ಟ ನಿರ್ದೇಶನಗಳನ್ನು ನೀಡಲಾಗಿರುತ್ತದೆ. ಮೈಸೂರು ವಿಭಾಗದ ತರಬೇತಿ ಶಿಬಿರದಲ್ಲಿ ಕಾಫಿ ತೋಟದಲ್ಲಿ ಕೆಲಸ ನಿರ್ವಹಿಸುವ ಕಾರ್ಮಿಕರ ಬಗ್ಗೆ ಚರ್ಚಿಸಲಾಗಿ ಭವಿಷ್ಯ ನಿಧಿ ಪಡೆಯದಂರಹ ಕಾರ್ಮಿಕರು ಅವರ ವಾರ್ಷಿಕ ಆದಾಯವು ಮೇಲೆ ವಿವರಿಸಿದಂತೆ ಮಾರ್ಗಸುಚಿಗೆ ಒಳಪಟ್ಟಿರುವ ಸಂದರ್ಭಗಳಲ್ಲಿ ಅಂತಹ ಕುಟುಂಬಗಳಿಗೆ ಹಳದಿ ಪಡಿತರ ಚೀಟಿ ನೀಡಲು ಶಿಫಾರಸ್ಸು ಮಾಡಲು ನಿರ್ದೇಶಿಸಲಾಗಿರುತ್ತದೆ.

ಪುನರ್ ಸಮೀಕ್ಷೆಯ ಮಾಹಿತೆಯನ್ನು ಗ್ರಾಮಸಭೆಗಳ ಮುಂದಿಟ್ಟು, ಗುತಿಸಿದ ಅರ್ಹ ಕುಟುಂಬಗಳಿಗೆ ಬಿಪಿಎಲ್ ಹಾಗೂ ಅಂತ್ಯೋದಯ ಪಡಿತರ ಚೀಟಿಗಳು ಮತ್ತು ಉಳಿದವರಿಗೆ

ಎಪಿಎಲ್ ಪಡಿತರ ಚೀಟಿ ವಿತರಿಸಲು ಗ್ರಾಮಸಭೆಯ ಅನುಮೋದನೆ ಪಡೆದು ತಾಲ್ಲೂಕು ಮಟ್ಟದಲ್ಲಿ ರಚಿಸಲಾಗಿರುವ ಟಾಸ್ಕ್‌ಫೋರ್ಸ್ ಸಮಿತಿ ಪಡಿತರ ಚೀಟಿ ಹಂಚಲು ಕ್ರಮ ಕೈಗೊಳ್ಳಬೇಕೆಂಬ ನಿರ್ದೇಶನ ನೀಡಲಾಗಿದೆ.

ಈ ಆದೇಶವನ್ನು ಹೊರಡಿಸುವ ಮುನ್ನ ಮೇಲ್ಕಂಡ ಮಾನದಂಡಗಳನ್ನು ಸುದೀರ್ಘವಾಗಿ ಚರ್ಚಿಸಲಾಗಿದ್ದು, ಇಲಾಖೆಯ ಭರವಸೆ ಸಮಿತಿ ಮತ್ತು ಅಂದಾಜು ಸಮಿತಿ ಸಭೆಗಳಲ್ಲಿಯೂ ಸಹ ಚರ್ಚಿಸಿದ ನಂತರವೇ ಸರ್ಕಾರಿ ಆದೇಶವನ್ನು ಹೊರಡಿಸಲಾಗಿರುತ್ತದೆ. ಈ ಆದೇಶದ ಅನ್ವಯ ವೇಳಾಪಟ್ಟಿಯನ್ನು ಹೊರಡಿಸಲಾಗಿದ್ದು ತಾಲ್ಲೂಕು ಮತ್ತು ಜಿಲ್ಲಾಮಟ್ಟದ ಅಧಿಕಾರಿಗಳಿಗೆ ಈಗಾಗಲೇ ತರಬೇತಿ ನೀಎಲಾಗಿದೆ. ದಿನಾಂಕ: 28–3–2005 ರಂದು ಮನೆ ಮನೆ ಪುನರ್ ಸಮೀಕ್ಷೆ ಕಾರ್ಯ ಪ್ರಾರಂಭವಾಗಲಿದ್ದು ದಿನಾಂಕ: 23–4–2005 ರಂದು ಮುಕ್ತಾಯಗೊಳ್ಳಲಿದೆ.

ಶ್ರೀ ಬಿ. ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು):– ಮಾನ್ಯ ಅಧ್ಯಕ್ಷರೆ, ನಿನ್ನೆ ದಿವಸ ಗಂಟೆ ಗಟ್ಟಲೆ ಚರ್ಚೆ ಮಾಡಿ ನಾವು ಇಲ್ಲಿ ಸಲಹೆ ಕೊಟ್ಟು ಉಪ ಮುಖ್ಯ ಮಂತ್ರಿಗಳ ಮನವೊಲಿಸಿ ನಾವು ಉತ್ತರ ಕೊಡಿಸುತ್ತೇವೆ ಇದರ ಬಗ್ಗೆ ಸುದೀರ್ಘವಾಗಿ ಚರ್ಚೆ ಮಾಡಿ ಎಂದು ಹೇಳಿದಂತಹ ಸರ್ಕಾರ ಈಗ ಯಾವ ಮಾನದಂಡದ ಮೇಲೆ ಸರ್ವೆ ಮಾಡಬೇಕೆಂದು ಸುತ್ತೋಲೆ ಕಳುಹಿಸಿದ್ದಾರೆ, ಅದನ್ನು ಮತ್ತೊಮ್ಮೆ ಓದಿದ್ದೀರಿ. ನಮ್ಮ ಹತ್ತಿರ ಎಲ್ಲರ ಹತ್ತಿರ ಇದೆ. ಆದರೆ ನಿನ್ನೆ ಚರ್ಚೆ ಮಾಡಿದ ಪ್ರಮುಖ ವಿಷಯವನ್ನು ತಿಳಿದುಕೊಳ್ಳುವ ಪ್ರಯತ್ನವನ್ನು ಮಾನ್ಯ ಸಚಿವರು ಮಾಡಬೇಕಲ್ಲಾ. ನಾವು ಬಹಳ ಒತ್ತಾಯ ಮಾಡಿದ್ದು ಈ ಪ್ಲ್ಯಾಂಟೇಷನ್‌ನಲ್ಲಿ ಕೆಲಸ ಮಾಡುವಂತಹ ಕಾಫಿ ತೋಟದಲ್ಲಿ ಇರಬಹುದು, ಬೇರೆ ಬೇರೆ ತೋಟಗಾರಿಕೆ ಕೃಷಿ ಕಾರ್ಮಿಕರು ಏನಿದ್ದಾರೆ, ಮೊದಲು ಕೃಷಿ ಕಾರ್ಮಿಕರಿಗೆ ಉದ್ಯೋಗ ಇಲ್ಲ ಅವರು ಬೀದಿ ಪಾಲಾಗಿರುವಂತಹ ಸಂದರ್ಭ, ಆ ತೋಟಗಾರಿಕೆಯ ಕೃಷಿ ಕಾರ್ಮಿಕರಿಗೆ ಈ ಪಡಿತರ ವ್ಯವಸ್ಥೆಯಲ್ಲಿ ಅವಕಾಶ ಮಾಡಿಕೊಡಬೇಕು. ಇದು ಮೊದಲನೆಯದಾಗಿ ನಾವು ಡಿಮಾಂಡ್ ಮಾಡಿದ್ದು. ಅದನ್ನು ನೆನ್ನೆ ನೀವು ಚಿಕ್ಕಮಗಳೂರಿನಲ್ಲಿ ಹೇಳಿಕೆ ಕೊಟ್ಟಿದ್ದೀರಿ. ಚಿಕ್ಕಮಗಳೂರು ಜಿಲ್ಲೆಯ ತೋಟಗಾರಿಕೆ ಕೃಷಿ ಕಾರ್ಮಿಕರು ಆನಂದ ಪಟ್ಟಿದ್ದಾರೆ. ನೀವು ಇದರಲ್ಲಿ ಏಕೆ ಸೇರಿಸಲಿಲ್ಲ? ನೀವು ಹೇಳಿದ ಮೇಲೆ ಮಾಡಲೇಬೇಕು ಎಂದು ಇದು ನಮ್ಮ ಮೊದಲನೇ ಬೇಡಿಕೆ. ಎರಡನೆಯದು, ಸನ್ಮಾನ್ಯ ಮುಖ್ಯ ಮಂತ್ರಿಗಳಿಗೆ ತಮಗೆ ಗೊತ್ತಿದೆ. ಒಂದು ಸಾರಿ ಎರಡು ಹೆಕ್ಟೇರ್ ಜಮೀನು ಎಂದು ಹೇಳಿದ ಮೇಲೆ ಅವನು ಬಡವ ಎರಡು ಹೆಕ್ಟೇರ್ ಜಮೀನು ಇರುವ ಆ ಮನುಷ್ಯ ಎಲ್ಲೋ ಸಾಲ ಮಾಡಿ ಒಂದು ಹೆಚ್‌ಪಿ ಅಥವಾ ಎರಡು ಹೆಚ್‌ಪಿ ಬೋರ್‌ವೆಲ್ ಹಾಕಿಕೊಂಡಿದ್ದರೆ ಅಂತರ್ಜಲ ಕುಸಿದು ಹೋಗಿ ಆ ಬೋರ್‌ವೆಲ್ ದುಡ್ಡು ಕಟ್ಟುವುದಕ್ಕೆ ಆಗದೆ ತಲೆಯ ಮೇಲೆ ಕೈ ಇಟ್ಟುಕೊಂಡು ಅವನು ಕೂತಿದ್ದಾನೆ. ಅಕಸ್ಮಾತ್ ಒಂದು ಹೆಚ್‌ಪಿ ಅಥವಾ ಎರಡು ಹೆಚ್‌ಪಿ ಬೋರ್‌ವೆಲ್ ಇದ್ದರೆ ಇದು ಅವನಿಗೆ ಅನ್ಯಾಯವಾಗುವುದಿಲ್ಲ ಎಂದು

ಹೇಳುವುದಾದರೆ ಇದು ಅಕ್ಷಮ್ಯ ಅಪರಾಧ. ಅವನಿಗೆ ಅನ್ಯಾಯ ಮಾಡಿದ ಹಾಗಾಗುತ್ತದೆ. ನಾನು ಸರ್ಕಾರಕ್ಕೆ ಏನು ಮನವಿ ಮಾಡಿಕೊಂಡೆ, ಎರಡು ಹೆಕ್ಟೇರ್ ಜಮೀನು ಇರುವಂತಹ ರೈತ ಅವನ ಹತ್ತಿರ ಏನೇ ಇರಲಿ ಮೊಪೆಡ್ ಇರಲಿ, ನೀವೇ ಸಾಲ ಕೊಟ್ಟ ಒಂದು ಟಿಲ್ಲರ್ ಇರಲಿ ಏನೇ ಇದ್ದರೂ ಎರಡು ಎಕರೆ ಇದೆ ಎಂದರೆ ಆ ಜಮೀನು ಐದು ಎಕರೆ ಆಯಿತು. ಅವನಿಗೆ ಇದು ಯಾವುದೇ ಕಾನೂನು ರಿಲ್ಯಾಕ್ಸ್ ಮಾಡಿ ಎಂದು ಎರಡನೇ ಬೇಡಿಕೆ ತಮ್ಮ ಹತ್ತಿರ ಇಡುವ ಪ್ರಯತ್ನ ಮಾಡಿದೆವು. ಮೂರನೆಯದು ಸಾಮಾನ್ಯ ಕೃಷಿ ಕಾರ್ಮಿಕ, ಮೀನುಗಾರ, ಕೂಲಿ ಮಾಡುವವನು ಸಣ್ಣ ಮೊಪೆಡ್ ಇಟ್ಟುಕೊಂಡಿರುತ್ತಾರೆ. ನಾಲ್ಕು ದಿವಸಕ್ಕೆ ಒಂದು ಲೀಟರ್ ಪೆಟ್ರೋಲ್ ಉಪಯೋಗಿಸುವುದಿಲ್ಲ. ಅವನು ಈ ಸವಲತ್ತಿನಿಂದ ವಂಚಿತನಾಗುತ್ತಾನೆ. ಅದನ್ನು ನೀವು ಮಾಡಬಾರದು ಎಂದು ಹೇಳಿದೆವು. ಲ್ಯಾಂಡ್ ಫೋನ್ ಬಗ್ಗೆ ನನ್ನ ಹತ್ತಿರ ಬನ್ನಿ ಹೇಳುತ್ತೇನೆ. ದಕ್ಷಿಣ ಕನ್ನಡ, ಉತ್ತರ ಕರ್ನಾಟಕ ಈ ಕಡೆ ಹೋದರೆ 200 ರೂಪಾಯಿ ಖರ್ಚು ಇರುವುದಿಲ್ಲ ಲ್ಯಾಂಡ್ ಫೋನ್ ಇಟ್ಟು ಕೊಂಡಿರುತ್ತಾರೆ. ಅವನನ್ನು ಇದಕ್ಕೆ ಸೇರಿಸುವ ಪ್ರಯತ್ನ ಮಾಡಿದ್ದೀರಿ. ಲ್ಯಾಂಡ್ ಫೋನ್ ಇಟ್ಟಿಕೊಂಡಿರುವವರಿಗೆ, ಇದನ್ನು ರಿಲ್ಯಾಕ್ಸ್ ಮಾಡಬೇಕೆಂದು ಸಲಹೆ ಕೊಟ್ಟಿದ್ದೇವೆ. ಮುಖ್ಯ ಮಂತ್ರಿಗಳಿಗೆ ಗೊತ್ತಿಗೆ ಅಂತ್ಯೋದಯ ಅನ್ನ ಯೋಜನೆ ಕೇಂದ್ರ ಸರ್ಕಾರದ ಉದ್ದೇಶ ಆ ಬಿಕ್ಷಕರಂತೆ ಯಾರದೇ ಬೆಂಬಲ ಇಲ್ಲದೆ 65 ವರ್ಷ ಆದ ಮುದುಕ ಅಜ್ಜ ಅಜ್ಜಿಯರು ಏನಿದ್ದಾರೆ ಅವರಿಗೆ ನಾವು ಅಂತ್ಯೋದಯದಲ್ಲಿ ಓಲ್ಡ್ ಏಜೆ ಪೆನ್‌ಷನ್ 100 ರೂಪಾಯಿ ಕೊಡುತ್ತೇವೆ. ಯಾರು ಓಲ್ಡ್ ಏಜ್ ಪೆನ್‌ಷನ್ ಪಡೆಯುತ್ತಾರೆ ಅವರಿಗೆ ಅಂತೋಧ್ಯಯ ಯೋಜನೆ ಕೊಡುತ್ತೇವೆಂದು ಹೇಳುವುದನ್ನು ಬಿಟ್ಟು ಅವನಿಗೆ ಈ ಸವಲತ್ತು ಸಿಗುವುದಿಲ್ಲ ಎಂದರೆ ಭಿಕ್ಷುಕನಾಗಿ ಅಲೆಯುವವನಿಗೆ ಕೊಡುವುದು ಬಿಟ್ಟು ಇನ್ನು ಯಾರಿಗೆ ಕೊಡುತ್ತೀರಿ? ಆದ್ದರಿಂದ ಈ ಅಂತ್ಯೋದಯ ಅನ್ನ ಯೋಜನೆಗೆ ಅರ್ಹತೆ ಅವರು ಓಲ್ಡ್ ಏಜೆ ಪೆನ್‌ಷನ್ ತೆಗೆದುಕೊಳ್ಳಬೇಕೆಂದು ಇರಬೇಕು ಎಂದು ಹೇಳಬೇಕಾಗಿತ್ತು. ಆಕಸ್ಮಾತ್ ಓಲ್ಡ್ ಏಜೆ ಪೆನ್‌ಷನ್ ತೆಗೆದುಕೊಳ್ಳುವವರು ಬಿಟ್ಟು ಹೋಗಿದ್ದರೆ ಅದರಲ್ಲಿ ಸೇರಿಸುತ್ತೇವೆ ಎಂದು ಹೇಳುಬೇಕಾಗಿತ್ತು. ಈ ರೀತಿ ನಾಲ್ಕೈದು ಪ್ರಮುಖ ಬೇಡಿಕೆ ನಿಮ್ಮ ಮುಂದೆ ಇಟ್ಟಿದ್ದೇವೆ. ನಿಮ್ಮ ಉತ್ತರ ಕರ್ನಾಟಕದ ಭಾಗದಲ್ಲಿ ಹದಿನೈದು ಎಕರೆ ಅಥವಾ ಇಪ್ಪತ್ತು ಎಕರೆ ಹೊಲ ಉಳ್ಳವನೂ ಕೂಡ ಕೂಲಿ ಮಾಡುವುದಕ್ಕೆ ಹೋಗುತ್ತಾನೆ. ಮಾನ್ಯ ಶ್ರೀರಾಮರೆಡ್ಡಿಯವರೆ, ಐದು ನಿಮಿಷ ಉಪ ಮುಖ್ಯಮಂತ್ರಿಗಳನ್ನು ಮಾತನಾಡಿಸಬೇಕು. ನಾನು ಮುಖ್ಯ ವಿಚಾರವನ್ನು ಹೇಳುತ್ತಿದ್ದೇನೆ. ಏಕೆಂದರೆ ಮಾನ್ಯ ಮುಖ್ಯಮಂತ್ರಿಗಳ ತಲೆಗೆ ನಾನು ಹೇಳುವುದು ಹೋಗಬೇಕು. ಏಕೆಂದರೆ ನಿನ್ನೆ ನಾವು ಅಷ್ಟೆಲ್ಲಾ ಹೇಳಿದ್ದರೂ ಕೂಡ ಇಂದು ಅವುಗಳನ್ನು ಅಳವಡಿಸಿಕೊಳ್ಳದೇ ಮಾನ್ಯ ಆಹಾರ ಸಚಿವರು ಉತ್ತರ ಕೊಟ್ಟಿದ್ದಾರೆ. ಈ ಉತ್ತರವನ್ನು ನೋಡಿದರೆ ಗೋರ್ಕಲ್ಲ ಮೇಲೆ ಮಳೆ ಸುರಿದಂತೆ ಸರ್ವಜ್ಞ ಎನ್ನುವ ಹಾಗಿದೆ. ಇದೇ ವಿಚಾರದಲ್ಲಿ ಈ ಉತ್ತರದಿಂದ ನಮ್ಮನ್ನು ಕೆಣಕಿ ಇದರ ಬಗ್ಗೆಯೇ ಚರ್ಚೆ ಮಾಡಿಕೊಂಡು 5 ಗಂಟೆಯವರೆಗೂ ಎಳೆಯಬೇಕು ಎಂದುಕೊಂಡಿದ್ದಾರೇನೋ

ಗೊತ್ತಿಲ್ಲ. ಏಕೆಂದರೆ ನಾನು ನಿನ್ನೆಯೇ ಎಲ್ಲಾ ವಿಚಾರಗಳನ್ನು ಹೇಳಿದ್ದೇನೆ. ನಾನು ಉತ್ತರ ಕರ್ನಾಟಕದವರಾದ ಆ ಕಡೆಯಲ್ಲಿರುವ ಶಾಸಕರವನ್ನು ನಾನು ವಿನಂತಿ ಮಾಡುತ್ತೇನೆ, ನಿಮ್ಮ ಕಡೆ 15 ಎಕರೆ ಖುಷ್ಕಿ ಜಮೀನು ಹೊಂದಿದ್ದರೂ ಕೂಡ ಅದು ಈ ಭಾಗದಲ್ಲಿ ರೈತ ಹೊಂದಿರುವ ಒಂದು ಎಕರೆ ನೀರಾವರಿ ಜಮೀನಿಗೆ ಸಮ. ಏಕೆಂದರೆ ಅವನಿಗೆ 15 ಎಕರೆ ಇದ್ದರೂ ಅಲ್ಲಿ ಏನೂ ಅವನು ಬೆಳೆಯುವುದಿಲ್ಲ. ಅದಕ್ಕೇ ಅದನ್ನು ರಿಲ್ಯಾಕ್ಸ್ ಮಾಡಿ ಮತ್ತು ಎರಡೂವರೆ ಹೆಕ್ಟೇರ್ ಎಂದು ಮಾಡಬೇಡಿ, ಅವನು 5 ಎಕರೆ, 10 ಎಕರೆ ಹೊಲ ಹೊಂದಿದ್ದರೂ ಸಹ ಅವನನ್ನು ಈ ಚೌಕಟ್ಟಿನಲ್ಲಿ ತನ್ನಿ ಎಂದು ಸಲಹೆಯನ್ನು ಹಿಂದಿನ ನಾಲ್ಕು ವರ್ಷಗಳಲ್ಲಿ ಬಂದಂಥ ಬರಗಾಲ ಪರಿಸ್ಥಿತಿಯ ವಾಸ್ತವತೆಯ ಹಿನ್ನೆಲೆಯಲ್ಲಿ ಕೊಟ್ಟಿದ್ದೇನೆ. ಈ ಹಿನ್ನೆಲೆಯಲ್ಲಿ ಇವೆಲ್ಲಕ್ಕೂ ರಿಲ್ಯಾಕ್ಸ್ ಮಾಡಿ ಅನುಕೂಲ ಮಾಡಿಕೊಡಿ ಎಂದು ನಿನ್ನೆಯ ದಿವಸ ಈ ಬಗ್ಗೆ ಸುದೀರ್ಘವಾಗಿ ಚರ್ಚೆಯಾದಾಗ ನಮ್ಮ ಉಪ ಮುಖ್ಯಮಂತ್ರಿಗಳ ಗಮನಕ್ಕೆ ತರುವ ಪ್ರಯತ್ನವನ್ನು ನಾವೆಲ್ಲಾ ಮಾಡಿದ್ದೇವೆ. ನಿನ್ನೆಯೇ ಈ ಬಗ್ಗೆ ಚರ್ಚೆಯಾಗಿದ್ದರೂ ನಾನು ಈಗಲೂ ನಿಮಗೆ ಒಂದು ಸಲಹೆಯನ್ನು ಕೊಡಬಯಸುತ್ತೇನೆ. ತಾವು ಬೇಕಾದರೆ ನಾಳೆ ಉತ್ತರ ಕೊಡಿ. ಇವೊತ್ತು ಏಕೋ ಟೈಂ ಸರಿ ಇಲ್ಲ. ಮತ್ತೆ ನಾನು ವೆಲ್‌ಗೆ ಬರುವ ಹಾಗೆ ಮಾಡಬೇಡಿ. ಆಹಾರ ಮಂತ್ರಿಗಳೇ, ನೀವು ಬೇಕಾದರೆ ಮುಖ್ಯಮಂತ್ರಿಗಳ ಜೊತೆ, ಸರ್ಕಾರದ ಜೊತೆ ಸಮಾಲೋಚನೆಯನ್ನು ಮಾಡಿ ಇವೆಲ್ಲವನ್ನೂ ರಿಲ್ಯಾಕ್ಸ್ ಮಾಡಿ ನನಗೆ ಉತ್ತರ ಕೊಡಿ. ಇವೆಲ್ಲವನ್ನೂ ಮಾಡುವುದಕ್ಕೆ ನಿಮಗೆ ಯಾವುದಾದರೂ ಪ್ರಾಬ್ಲಂ ಬರುತ್ತದೆ ಎನ್ನುವುದಾದರೆ ನಾವೂ ಬೇಕಾದರೆ ನಿಮ್ಮ ಜೊತೆ ಕುಳಿತು ಮಾತನಾಡಿ ಇವೆಲ್ಲವನ್ನೂ ಚೌಕಟ್ಟಿನಲ್ಲಿ ಸೇರಿಸಿಕೊಂಡು ಸಮೀಕ್ಷೆ ಮಾಡಿ. ನಾನು ಏಕೆ ಈಗಾಗಲೇ ಅರ್ಜೆಂಟ್ ಮಾಡುತ್ತಿದ್ದೇನೆಂದರೆ ನಾಳಿದ್ದಿನಿಂದಲೇ ಸಮೀಕ್ಷೆಯನ್ನು ಪ್ರಾರಂಭ ಮಾಡುತ್ತಿದ್ದೀರಿ. ಈಗಾಗಲೇ ಹಿಂದೆ ನಾಲ್ಕೈದು ಬಾರಿ ಸಮೀಕ್ಷೆಯನ್ನು ಮಾಡಿದ್ದಾರೆ. ಈಗಲೂ ಸಮೀಕ್ಷೆ ಮಾಡುವುದು ಅದೇ ಅಧಿಕಾರಿಗಳೇ. ಯಾರು ಅರ್ಹರಿದ್ದೂ ಅನರ್ಹರಾಗಿದ್ದಾರೆ ಅಂಥವರನ್ನು ಅರ್ಹರನ್ನಾಗಿ ಮಾಡಬೇಕೇ ಹೊರತು ಅದನ್ನು ಬಿಟ್ಟು ಮನೆ ಮನೆಗೆ ಏಕೆ ಹೋಗುತ್ತಾರೆಯೋ ಗೊತ್ತಿಲ್ಲ. ಸಮೀಕ್ಷೆಗೆ ಅದೇ ಅಧಿಕಾರಿಗಳು ಹೋದಮೇಲೆ ಮತ್ತೆ ಅದೇ ಗೊಂದಲವಾಗಿ ಈ ಅವ್ಯವಸ್ಥೆಯಾಗಿದೆ. ಹಿಂದೆ ನಾಲ್ಕೈದು ಬಾರಿ ಸಮೀಕ್ಷೆಯನ್ನು ಮಾಡಿದ್ದಾರೆ. ಮತ್ತೆ ನಿನ್ನೆ ಹಣಕಾಸಿನ ಸಚಿವರಾದ ಮಾನ್ಯ ಸಿದ್ದರಾಮಯ್ಯನವರು ಮಾತನಾಡಬೇಕಾದರೆ ಏನು ಹೇಳಿದರೆಂದರೆ ಒಂದೊಂದು ತಾಲ್ಲೂಕಿಗೂ ಸಮೀಕ್ಷೆ ಮಾಡಲು 30 ಸಾವಿರ ರೂಪಾಯಿಗಳನ್ನು ಪ್ರಾವಿಷನ್ ಮಾಡಿದ್ದೇನೆ ಎಂದು ಹೇಳಿದರು. ಇದು ಸಮೀಕ್ಷೆಗಾಗಿ ಇಟ್ಟಿರುವ ಹಣ. ಹೀಗಿರುವಾಗ ಈ ಬಾರಿ ಮಾಡುವ ಸಮೀಕ್ಷೆ ವೈಜ್ಞಾನಿಕವಾಗಿ ಇರಬೇಕು. ಅದಕ್ಕೆ ನೀವು ಕೊಡುವಂಥ ಗೈಡ್‌ಲೈನ್ಸ್ ಸರಿಯಾದ ರೀತಿ ಇರಬೇಕು. ನಾವು ಹೇಳಿರುವುದನ್ನೆಲ್ಲಾ ಅಳವಡಿಸಿಕೊಂಡು ಇದನ್ನು ಜಾರಿಗೆ ಕೊಡಿ ಎನ್ನುವುದೇ ನಮ್ಮ ಒತ್ತಾಯ. ನೀವು ಈ ಬಗ್ಗೆ ಈಗಾಗಲೇ ಸಮಾಲೋಚನೆಯನ್ನು ಮಾಡಿದ್ದರೆ ಉತ್ತರ ಕೊಡಿ. ಈ ರೀತಿ ಉತ್ತರ ಕೊಡಬೇಡಿ. ನಾವು ಬೇಕಾದರೆ ನಿಮ್ಮ ಉತ್ತರಕ್ಕಾಗಿ

ನಾಳೆಯವರೆಗೂ ಕಾಯುವುದಕ್ಕೆ ರೆಡಿ ಇದ್ದೇವೆ. ನೀವು ಮುಖ್ಯಮಂತ್ರಿಗಳೊಡನೆ ಸಮಾಲೋಚನೆ ಮಾಡಿ. ಇದನ್ನು ನಿಮ್ಮ ದೃಷ್ಟಿಯಿಂದಲೇ ನಾನು ಹೇಳುತ್ತಿರುವುದು. ಸರ್ಕಾರಕ್ಕೆ ಹಾಗೂ ಪ್ರತಿಪಕ್ಷಕ್ಕೂ ಒಳ್ಳೆಯ ಹೆಸರು ಬರಬೇಕು ಹಾಗೂ ಇದರಿಂದಾಗಿ ನಿಜವಾದ ಬಡವರಿಗೆ ಪಡಿತರ ಚೀಟಿ ಸಿಗಬೇಕು. ಆ ಕಡೆ ಈ ಕಡೆ ಕುಳಿತಿರುವ ಎಲ್ಲಾ ಶಾಸಕರ ಕಳಕಳಿಯೂ ಇದೇ ಆಗಿದೆ. ಇದರಲ್ಲೇನೂ ರಾಜಕಾರಣ ಇಲ್ಲ. ಅದಕ್ಕಾಗಿ ನೀವು ಕುಳಿತು ಅರ್ಧಗಂಟೆ ಚರ್ಚೆ ಮಾಡಿ ಸಮಾಲೋಚನೆ ಮಾಡಿ. ನೀವು ಬೇಕಾದರೆ ನಮ್ಮನ್ನೂ ಕರೆಯಿರಿ. ನಾಳೆ ಬೇಕಾದರೆ 9 ಗಂಟೆಗೇ ಬರುತ್ತೇವೆ. ಚರ್ಚೆ ಮಾಡಿಯಾದ ಮೇಲೆ ಬೇಕಾದರೆ ಉತ್ತರ ಕೊಡಿ. ಆದಾದನಂತರ ಸಮೀಕ್ಷೆ ಪ್ರಾರಂಭವಾದರೆ ಅದರ ಪರ್ಪಸ್ ಸರ್ವ್ ಆದಂತಾಗುತ್ತದೆ ಮತ್ತು ಯಾರು ಅನರ್ಹರಿದ್ದಾರೆ ಅವರಿಗೆ ಅರ್ಹತೆ ಸಿಗುತ್ತದೆ ಮತ್ತು ಅವರಿಗೆ ಪಡಿತರ ವ್ಯವಸ್ಥೆಯನ್ನು ಕಾರ್ಡ್ ಸಿಗುತ್ತದೆ ಎನ್ನುವುದೊಂದೇ ನನ್ನ ಒತ್ತಾಯ. ಇದರ ಬಗ್ಗೆ ತಾವು ಸಮಾಲೋಚನೆ ಮಾಡಿ ಒಂದು ತೀರ್ಮಾನಕ್ಕೆ ಬಂದು ತಾವು ಹೇಳಿಕೆಯನ್ನು ಕೊಡಿಸಬೇಕು ಎಂದು ನಾನು ಒತ್ತಾಯ ಮಾಡುತ್ತೇನೆ.

ಶ್ರೀ ಜೆ. ಸಿ. ಮಾಧುಸ್ವಾಮಿ:– ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಈ ಬಗ್ಗೆ ಸಮಾಲೋಚನೆ ಮಾಡಲು ನಾಳೆಯೋ ಅಥವಾ ಸೋಮವಾರವೋ ಒಂದು ಸಭೆಯನ್ನು ಕರೆಯಿರಿ. ಸಭೆ ಕರೆದು ಫ್ಲೋರ್ ಲೀಡರ್ಸ್ ಜೊತೆ ಚರ್ಚೆ ಮಾಡಿ ಅವರ ಕಷ್ಟವೂ ಏನು ಇದೆ ಎಂಬುದನ್ನು ನಮಗೂ ಹೇಳಲಿ.

ಶ್ರೀ ಹೆಚ್. ಎಸ್. ಮಹದೇವ್‌ಪ್ರಸಾದ್:– ನೀವು ಹೇಳಿದಂಥ ವಿಚಾರಗಳಿಗೆಲ್ಲಾ ನಾನು ಈಗ ವಿವರಣೆಯನ್ನು ಕೊಡುತ್ತೇನೆ.

ಶ್ರೀ ಜೆ. ಸಿ. ಮಾಧುಸ್ವಾಮಿ:– ತಾವು ಒಂದು ನಿಮಿಷ ಈಲ್ಡ್ ಆಗಿ. ಇಲ್ಲಿ ಹಳೆಯ ಸರ್ಕ್ಯುಲರ್ ಏನಿತ್ತೋ ಅದರಲ್ಲಿ ಇರುವುದನ್ನೇ ಇಲ್ಲಿ ಪುನರುಚ್ಚಾರ ಮಾಡಿದ್ದಾರೆಯೇ ಹೊರತು ನಿನ್ನೆಯ ದಿವಸ ವಿರೋಧ ಪಕ್ಷದ ನಾಯಕರು ಹೇಳಿದ ವಿಚಾರಗಳು ತಮ್ಮ ಗಮನಕ್ಕೆ ಬಂದಹಾಗೆ ಕಾಣುತ್ತಿಲ್ಲ. ಮಾನ್ಯ ಸಿದ್ದರಾಮಯ್ಯನವರಿಗೆ ನಿನ್ನೆಯ ದಿವಸ ನಾವು ಒಪ್ಪಿಸಿದ್ದೇವೆ. ಅವರೂ ಈ ಸಭೆಯಲ್ಲಿ ಹೇಳಿರುವುದೇನೆಂದರೆ ಮಾನ್ಯ ಮಂತ್ರಿಗಳು ಹೇಳುವ ಉತ್ತರದಲ್ಲಿ ಇದು ಬಗೆಹರಿಯದಿದ್ದರೆ ಎಲ್ಲರನ್ನೂ ಕರೆದು ಚರ್ಚೆ ಮಾಡಲಾಗುವುದು ಎಂದು ಆದುದರಿಂದ ಈಗ ನೀವು ಹೇಳುವುದರ ಬದಲು ಒಂದು ಸಭೆಯನ್ನು ತಾವು ಕರೆಯಿರಿ. ನಿಮ್ಮ ಕಷ್ಟ ಏನೆಂಬುದನ್ನು ಎಕ್ಸ್‌ಪ್ಲೈನ್ ಮಾಡಿ. ನಮ್ಮ ಸಲಹೆಯನ್ನೂ ತೆಗೆದುಕೊಳ್ಳಿ. ಇದರಲ್ಲಿ ಏನು ತಪ್ಪಾಗುತ್ತದೆ?

ಶ್ರೀ ಹೆಚ್. ಎಸ್. ಮಹದೇವ್‌ಪ್ರಸಾದ್:– ಈಗಾಗಲೇ ನಾನು ಸ್ಟೇಟ್‌ಮೆಂಟ್ ಮಾಡಿದ್ದೇನೆ. ತದನಂತರದಲ್ಲಿ ಅವರು ಏನು ಕೇಳಿದ್ದಾರೆ ಅದಕ್ಕೆ ನಾನು ಈಗ ಉತ್ತರ ಕೊಡುತ್ತೇನೆ. ಅದಕ್ಕೂ ಅವರಿಗೆ...

ಶ್ರೀ ಸಿದ್ದರಾಮಯ್ಯ (ಉಪ ಮುಖ್ಯಮಂತ್ರಿಗಳು):– ಮಾನ್ಯ ಮಂತ್ರಿಗಳು ಉತ್ತರ ಕೊಡಲಿ. ಆ ಉತ್ತರಕ್ಕೂ ಇವರಿಗೆ ಸಮಾಧಾನವಾಗಲಿಲ್ಲವೆಂದರೆ ನಾಳೆ ಬೆಳಿಗ್ಗೆ ಬೇಕಾದರೆ ಒಂದು ಮೀಟಿಂಗ್ ಕರೆದು ಚರ್ಚೆ ಮಾಡೋಣ. ಅವರು ಉತ್ತರ ಕೊಡಲಿ. ಅವರು ಉತ್ತರ ಕೊಡುವುದೇ ಬೇಡ ಎಂದರೆ ಹೇಗೆ?

ಶ್ರೀ ಎಸ್. ಎಸ್. ಪಾಟೀಲ್:– ಮಾನ್ಯ ಅಧ್ಯಕ್ಷರೆ, ನಾವೂ ಕೂಡ ಮಾತ ನಾಡುವವರಿದ್ದೇವೆ. ನಾನು ಸುಮ್ಮನೆ ಕೂಡುವುದಕ್ಕೆ ಆಗುವುದಿಲ್ಲ. ಏಕೆಂದರೆ ಈ ವಿಚಾರ ಎಲ್ಲರಿಗೂ ಸಂಬಂಧಪಟ್ಟಂಥದ್ದೇ ಇದೆ. ಈಗೇನು ತಾವು ಎರಡು ಹೆಕ್ಟೇರ್ ಎಂದು ಹೇಳುತ್ತಿದ್ದೀರಿ ನಮ್ಮ ಬಯಲು ಸೀಮೆಯಲ್ಲಿ ಹತ್ತು ಎಕರೆ ಇದ್ದರೂ ನಮಗೆ ಬದುಕುವುದಕ್ಕೆ ಆಗುವುದಿಲ್ಲ. ಅಂಥ ಪರಿಸ್ಥಿತಿ ನಮ್ಮ ಭಾಗದಲ್ಲಿದೆ. ಮೊನ್ನೆ ನಿಮ್ಮ ಆರ್ಡರ್ ಬಂದಮೇಲೆ ಸುಮಾರು ಐದುನೂರು ಮಂದಿ ನಮ್ಮ ಮನೆಗೆ ಬಂದುಬಿಟ್ಟರು. ಐದು ಎಕರೆ ಮೇಲೆ ಯಾರೂ ಬದುಕುವುದಕ್ಕೆ ಆಗುವುದಿಲ್ಲ ಮತ್ತು ಅದು ಸರಿಯೂ ಅಲ್ಲ, ಈ ಹಿಂದೆ 12 ಸಾವಿರ ರೂಪಾಯಿಗಳ ವರಮಾನ ಎಂದು ಏನೋ ನಿಗದಿ ಮಾಡಿದ್ದಿರಿ. ಅದನ್ನು ಈ ಬಾರಿ ಬಿಟ್ಟು ಎಕರೆ ಇಷ್ಟು ಎಂದು ಹಾಕಿಬಿಟ್ಟಿದ್ದೀರಿ. ಈ ರೀತಿ ಹೊಸ ಹೊಸದಾಗಿ ಮಾಡುವುದರಿಂದ ನಮಗೂ ತೊಂದರೆಯಾಗುತ್ತದೆ. ಇದು ಎಲ್ಲಾ ಶಾಸಕರಿಗೂ ಸಂಬಂಧಪಡುತ್ತದೆ. ಏಕೆಂದರೆ ಇದರಲ್ಲಿ ಬಡವರ ಪ್ರಶ್ನೆ ಇದೆ. ಆದುದರಿಂದ ಬಯಲು ಸೀಮೆಗೆ ನೀವು ಕನಿಷ್ಟ ಹತ್ತು ಎಕರೆ ಎಂದಾದರೂ ಮಾಡಬೇಕಾಗುತ್ತದೆ.

ಶ್ರೀ ಬಸವರಾಜ ರಾಯರೆಡ್ಡಿ:– ಇದರ ಬದಲು 12 ಸಾವಿರ ರೂಪಾಯಿಗಳ ವರಮಾನ ಎಂದು ಇಟ್ಟುಬಿಡಿ.

ಶ್ರೀ ಮಹದೇವ:– ಮಾನ್ಯ ಅಧ್ಯಕ್ಷರೆ, ಬಯಲು ಸೀಮೆ ಎನ್ನುವುದು ಕೇವಲ ಉತ್ತರ ಕರ್ನಾಟಕದ ಭಾಗದಲ್ಲಿ ಮಾತ್ರವಲ್ಲ ನಮ್ಮ ಕಡೆಯೂ ಬಯಲು ಸೀಮೆ ಇದೆ. ಇದನ್ನು ದಯವಿಟ್ಟು ತಾವು ಗಮನಿಸಬೇಕು.

ಶ್ರೀ ಜಿ. ವಿ. ಶ್ರೀರಾಮರೆಡ್ಡಿ:– ಈಗೇನು ಇವರು ಎರಡು ಹೆಕ್ಟೇರ್ ನಿಗದಿ ಮಾಡಿದ್ದಾರೆ, ಅದು ಮಂಡ್ಯ ಜಿಲ್ಲೆಯವರಿಗೆ, ಹಾಸನ ಜಿಲ್ಲೆಯವರಿಗೆ ಮತ್ತು ಮೈಸೂರು ಜಿಲ್ಲೆಯವರಿಗೆ ಪರವಾಗಿಲ್ಲ.

ಶ್ರೀ ಸಿದ್ದರಾಮಯ್ಯ:– ಮೈಸೂರು ಜಿಲ್ಲೆಯಲ್ಲಿ ಎರಡು ಹೆಕ್ಟೇರ್ ಇಟ್ಟು ಕೊಂಡಿರುವವರಲ್ಲಿ ಬಡವರಿಲ್ಲವೋ?

ಶ್ರೀ ಜಿ. ವಿ. ಶ್ರೀರಾಮರೆಡ್ಡಿ:– ನಾನು ಹೇಳುತ್ತಿರುವುದು ನೀರಾವರಿ ಪ್ರದೇಶವಿರುವ ಬಗ್ಗೆ.

ಶ್ರೀ ಸಿದ್ದರಾಮಯ್ಯ:– ಇಡೀ ಮೈಸೂರು ಜಿಲ್ಲೆಗೆಲ್ಲಾ ನೀರಾವರಿ ಇದೆಯೋ? ಇಡೀ ಚಾಮರಾಜನಗರ ಜಿಲ್ಲೆಗೆಲ್ಲಾ ನೀರಾವರಿ ಇದೆಯೋ? ಇಡೀ ಮಂಡ್ಯ ಜಿಲ್ಲೆಗೆಲ್ಲಾ ನೀರಾವರಿ ಇದೆಯೋ? ಎಲ್ಲಿದೆ ಎಲ್ಲಾ ಕಡೆ ನೀರಾವರಿ?

ಶ್ರೀ ಜಿ. ವಿ. ಶ್ರೀರಾಮರೆಡ್ಡಿ:– ನೀರಾವರಿ ಇರತಕ್ಕಂಥ ಪ್ರದೇಶ ಎಂದು ನಾವು ಹೇಳುತ್ತಿದ್ದೇವೆ. ನೀರಾವರಿ ಇರತಕ್ಕಂಥ ಪ್ರದೇಶಕ್ಕೆ ಎರಡೂವರೆ ಹೆಕ್ಟೇರ್ ಎಂದು ಹೇಳಿದರೆ ಪರವಾಗಿಲ್ಲ. ನಮ್ಮಂಥ ಪ್ರದೇಶದ ಕಡೆ ಹತ್ತು ಎಕರೆ, ಹದಿನೈದು ಎಕರೆ ಇದ್ದರೂ ಕೂಡ ಅಲ್ಲಿ ಅವನು ಕೂಳು ಇಲ್ಲದೇ ಸಾಯುತ್ತಿದ್ದಾನೆ. ಹೀಗಿರುವಾಗ ನೀವು ಎರಡು ಹೆಕ್ಟೇರ್ ಎಂದರೆ ನಮ್ಮ ಗತಿ ಏನು ಸಾರ್?

ಅಧ್ಯಕ್ಷರು:– ಸಿದ್ದರಾಮಯ್ಯನವರೆ, ಇದೇನೋ ಚರ್ಚೆ 5 ಗಂಟೆಯಾದರೂ ಇದು ಮುಗಿಯುವುದಿಲ್ಲವೆಂದು ಕಾಣುತ್ತದೆ. ಆದುದರಿಂದ ಒಂದು ಸಭೆಯನ್ನು ಕರೆದು.....

ಶ್ರೀ ಸಿದ್ದರಾಮಯ್ಯ:– ಸಂಬಂಧಪಟ್ಟ ಸಚಿವರು ಉತ್ತರವನ್ನು ಹೇಳುವುದಕ್ಕೆ ಅವಕಾಶ ಮಾಡಿಕೊಡಿ. ಅವರು ಮೊದಲು ಉತ್ತರ ಹೇಳಲಿ.

ಶ್ರೀ ಹೆಚ್. ಎಸ್. ಮಹದೇವಪ್ರಸಾದ್ (ಆಹಾರ ಮತ್ತು ನಾಗರೀಕ ಪೂರೈಕೆ ಸಚಿವರು):– ಮಾನ್ಯ ಅಧ್ಯಕ್ಷರೆ, ಒಡತನದ ರೇಖೆಗಿಂತ ಕೆಳಗಿರುವ ಕುಟುಂಬಗಳನ್ನು ಗುರುತಿಸಬೇಕಾದರೆ ನಾವು ಏನನ್ನಾದರೂ ಒಂದು ಮಾನದಂಡವನ್ನಾಗಿ ಇಟ್ಟುಕೊಳ್ಳಲೇ ಬೇಕಾಗುತ್ತದೆ. ಅದೇನೂ ಮಾನದಂಡವಿಲ್ಲದೇ ಕೇವಲ ಪರಮಾನ ಒಂದನ್ನೇ ಆಧಾರವನ್ನಾಗಿ ಇಟ್ಟುಕೊಂಡು ಸಮೀಕ್ಷೆ ಮಾಡುತ್ತೇವೆಂದರೆ ಆ ವರಮಾನವನ್ನಾದರೂ ಗುರುತಿಸುವುದಕ್ಕಾದರೂ ಒಂದು ಅಳತೆಗೋಲು ಬೇಕು, ಅದಕ್ಕೆ ಏನಾದರೂ ಒಂದು ಕ್ರೈಟರಿಯಾ ಇರಬೇಕು. ಅದಕ್ಕಾಗಿ ಈ ಒಂದು ಮಾನದಂಡವನ್ನು ಇಟ್ಟುಕೊಂಡಿದ್ದೇವೆ. ಹಿಂದೆ ಮಾಡಿದಂಥ ಮಾನದಂಡದಲ್ಲಿ ಟಿ. ವಿ. ಹಾಗೂ ಗ್ಯಾಸ್ ಹೊಂದಿರುವವರೂ ಕೂಡ ಕಾರ್ಡ್ ಪಡೆಯಲು ಅನರ್ಹರು ಎನ್ನುವ ವಿಚಾರವಿತ್ತು. ಆದರೆ ಅನೇಕ ಶಾಸಕರ ಸಲಹೆ ಮೇರೆಗೆ ಮತ್ತು ಜನ ಸಾಮಾನ್ಯರೂ ಕೂಡ ಇದನ್ನು ತೆಗೆಯಬೇಕು ಎಂದು ಒತ್ತಾಯ ಮಾಡಿದ ಮೇಲೆ ಈಗ ನಾವು ಆ ಮಾನದಂಡದಿಂದ ಇವೆರಡನ್ನೂ ರಿಲ್ಯಾಕ್ಸ್ ಮಾಡಿದ್ದೇವೆ. ಇನ್ನುಳಿದಂತೆ ವಿರೋಧ ಪಕ್ಷದ ನಾಯಕರು ಹಾಗೂ ಹಿರಿಯ ಸದಸ್ಯರುಗಳು ಜಮೀನಿನ ಬಗ್ಗೆ ಹೇಳಿದ್ದಾರೆ. ಅದಕ್ಕಾಗಿಯೇ ಎಲ್ಲಾ ಸದಸ್ಯರಿಗೂ ಈ ಪ್ರತಿಯನ್ನು ಸರ್ಕ್ಯುಲೇಟ್ ಮಾಡಲಾಗಿದೆ. ಅದರಲ್ಲಿ 9ನೇ ಐಟಂನಲ್ಲಿ ಏನು ಹೇಳಿದ್ದೇವೆಂದರೆ ಒಟ್ಟಾರೆ ಸಮೀಕ್ಷೆ ಮಾಡುವ ಸಂಧರ್ಬದಲ್ಲಿ ಕುಟುಂಬದ ಜೀವನ ಮಟ್ಟವನ್ನೂ ಕೂಡ ಸಮೀಕ್ಷೆ ಮಾಡಿ ನಿರ್ಣಯಿಸುವುದು ಎಂದು ಹೇಳಿದೆ. ಈ ಒಂದು ಕ್ಲಾಸ್‌ನಲ್ಲಿ ಅವರು ನಿಜವಾಗಲೂ ಬಡತನದ ಮಟ್ಟದಲ್ಲಿದ್ದಾನೆ ಅವನು ಬಿ.ಪಿ.ಎಲ್. ಕಾರ್ಡ್ ಹೊಂದುವುದಕ್ಕೆ ಅರ್ಹನಿದ್ದಾನೆ ಎಂದು ಮನಗಂಡರೆ ಸೇರಿಸಲು ಸಾಧ್ಯವಿದೆ ಆ ಸಮೀಕ್ಷಾ ತಂಡದಲ್ಲಿರುವ ಸದಸ್ಯರು ಅಂದರೆ ಗ್ರಾಮ ಪಂಚಾಯತಿಯ ಚುನಾಯಿತ ಸದಸ್ಯರುಗಳು, ಸಂಘ ಸಂಸ್ಥೆಯ ಪ್ರತಿನಿಧಿಗಳು ಇರುತ್ತಾರೆ,

ತಾಲ್ಲೂಕು ಮಟ್ಟದ ಒಬ್ಬ ಅಧಿಕಾರಿಯನ್ನು ನೋಡಲ್ ಆಫೀಸರ್‌ರನ್ನಾಗಿ ಒಂದೊಂದು ಗ್ರಾಮ ಪಂಚಾಯಿತಿಗೆ ನೇಮಕ ಮಾಡಿದ್ದೇವೆ, ಇವರಿಗೆಲ್ಲಾ ಸಾಕಷ್ಟು ತರಬೇತಿಗಳನ್ನು ಮೊದಲನೆಯ ಬಾರಿಗೆ ವಿಶೇಷವಾಗಿ ವಿಭಾಗ ಮಟ್ಟದಲ್ಲಿ, ಜಿಲ್ಲಾ ಮಟ್ಟದಲ್ಲಿ, ತಾಲ್ಲೂಕು ಮಟ್ಟದಲ್ಲಿ ತರಬೇತಿಯನ್ನು ಕೊಟ್ಟು ಅವರನ್ನು ಸಮೀಕ್ಷಾ ಕಾರ್ಯಕ್ಕೆ ಸಿದ್ಧಗೊಳಿಸಲಾಗಿದೆ. ಈ ಮಧ್ಯೆ ಗ್ರಾಮ ಪಂಚಾಯತಿ ಚುನಾವಣೆ ಬಂದುದ್ದರಿಂದ ಒಂದು ತಿಂಗಳ ಕಾಲ ಸಮೀಕ್ಷಾ ಕಾರ್ಯ ಮುಂದಕ್ಕೆ ಹೋಗಿತ್ತು. ಈಗ ತಾವೇ ಹೇಳಿದಿರಿ ಈಗಾಗಲೇ ನಾಲ್ಕೈದು ಬಾರಿ ಸಮೀಕ್ಷೆ ಮಾಡಿದ್ದಾರೆ, ಸರಿ ಇಲ್ಲ, ಇದಕ್ಕೇನಾದರೂ ನಿರ್ದಿಷ್ಟವಾದ ದಿನಾಂಕವನ್ನು ಗೊತ್ತುಪಡಿಸಿ ಸರಿಯಾಗಿ ಸಮೀಕ್ಷೆ ಮಾಡಿಸಿ ಇದನ್ನು ಕ್ಲೋಸ್ ಮಾಡಿಸಿ ಎಂದು ನೀವೇ ಹೇಳುತ್ತೀರಿ. ನೀವು ಆ ರೀತಿಯ ಒತ್ತಾಯವನ್ನು ಮಾಡಿದ್ದಿರಿ. ಆದರೆ ಚುನಾವಣಾ ಆಯೋಗದ ನೀತಿ ಸಂಹಿತೆ ಜಾರಿಯಾದ್ದರಿಂದ ಒಂದು ತಿಂಗಳ ಕಾಲ ಸಮೀಕ್ಷಾ ಕಾರ್ಯವನ್ನು ಮುಂದಕ್ಕೆ ಹಾಕಿದ್ದೆವು. ಈಗ ಮಾರ್ಚ್ 24 ರಿಂದ ಸಮೀಕ್ಷಾ ಕಾರ್ಯ ಪ್ರಾರಂಭಿಸಿ ಮೇ 23ಕ್ಕೆ ಸಮೀಕ್ಷಾ ಕಾರ್ಯವನ್ನು ಮುಕ್ತಾಯ ಮಾಡಬೇಕಾಗಿದೆ. ಏಕೆಂದರೆ ಮುಂದೆ ಇನ್ನೊಂದು ಚುನಾವಣೆ ಬರುತ್ತದೆ. ಹೀಗಿರುವಾಗ ಮತ್ತೆ ಸಮೀಕ್ಷಾ ಕಾರ್ಯವನ್ನು ಮುಂದಕ್ಕೆ ಹಾಕುತ್ತಾ ಹೋದರೆ ನಮಗೆ ನಿರ್ದಿಷ್ಟವಾದ ಬಡ ಕುಟುಂಬಗಳ ಸಂಖ್ಯೆ ನಿಖರವಾಗಿ ಸಿಗುವುದಕ್ಕೆ ಸಾಧ್ಯವಾಗುವುದಿಲ್ಲ. ಆ ಕಾರಣಕ್ಕಾಗಿ ಈಗೇನು ಸಮೀಕ್ಷಾಕಾರ್ಯವನ್ನು ಪ್ರಾರಂಭ ಮಾಡಿದ್ದೇವೆ ಇದು ಬಹಳ ಪಾರದರ್ಶಕವಾಗಿದೆ. ಅಂದಾಜು ಸಮಿತಿಯಲ್ಲಿರುವ ಶ್ರೀ ಬಸವಣ್ಣಪ್ಪನವರು, ಹಾಗೂ ಮಾನ್ಯ ಶ್ರೀರಾಮರೆಡ್ಡಿಯವರು ಈ ವಿಚಾರದ ಬಗ್ಗೆ ನನ್ನ ಜೊತೆ ಮಾತನಾಡಿ ಸಮೀಕ್ಷಾ ಕಾರ್ಯಕ್ರಮಗಳ ಬಗ್ಗೆ ತಿಳಿದುಕೊಂಡು ಬಹಳ ಮೆಚ್ಚುಗೆಯನ್ನು ವ್ಯಕ್ತಮಾಡಿದ್ದಾರೆ. ಒಂದು ತಾವು ಹೇಳಿರುವುದರಲ್ಲಿ ಮಾಡಿಫೈ ಮಾಡುವುದಕ್ಕೆ ನಾನು ತೀರ್ಮಾನ ಮಾಡಿದ್ದೇನೆ. ಅದೇನೆಂದರೆ ಎರಡು ಹೆಕ್ಟೇರ್ ಜಮೀನು ಇದ್ದು ಅದಕ್ಕೆ ಪಂಪ್‌ಸೆಟ್‌ನ್ನು ಹೊಂದಿರುವವರಿಗೆ ಎಸ್‌ಸಿ: ಎಸ್‌ಟಿ ಕಾರ್ಪೊರೇಷನ್‌ನಿಂದ ಗಂಗಾಕಲ್ಯಾಣ ಯೋಜನೆಯಡಿಯಲ್ಲಿ ಆ ಪಂಪ್‌ಸೆಟ್‌ನ್ನು ಅಳವಡಿಸಿಕೊಟ್ಟಿದ್ದರೆ ಅಂಥವರನ್ನು ನಾವು ಈ ಒಂದು ವ್ಯಾಪ್ತಿಯಿಂದ ವಿನಾಯಿತಿ ಮಾಡಿಸತಕ್ಕಂಥ...

ಶ್ರೀ ಬಿ. ಎಸ್. ಯಡಿಯೂರಪ್ಪ:– ಎಸ್.ಸಿ. ಎಸ್.ಟಿ ಯವರಿಗೇ ಮಾತ್ರ ಎಂದು ಏಕೆ ಹೇಳುತ್ತೀರಿ? ಎರಡು ಎಕರೆ, 5 ಎಕರೆ ಇರುವಂಥ ಯಾರನ್ನೂ ಕೂಡ ಈ ಚೌಕಟ್ಟಿನಲ್ಲಿ ತರಬೇಡಿ. ಅವರೆಲ್ಲರನ್ನೂ ಇದರಲ್ಲಿ ರಿಲ್ಯಾಕ್ಸ್ ಮಾಡಬೇಕು.

ಶ್ರೀ ಹೆಚ್. ಎಸ್. ಮಹದೇವಪ್ರಸಾದ್:– ಇದರ ಬಗ್ಗೆಯೂ ನಾವು ಕ್ಲಿಯರ್ ಆಗಿ ಹೇಳಿದ್ದೇವೆ. ಏನೆಂದರೆ ಒಂದು ಬೋರ್‌ವೆಲ್ ಹೊಂದಿ ನೀರಾವರಿ ಸೌಕರ್ಯ ಪಡೆಯುತ್ತಿರುವವರು, ಅಂದರೆ ನೀರಾವರಿ ಸೌಲಭ್ಯವನ್ನು ಪಡೆಯುತ್ತಿದ್ದರೆ ಮಾತ್ರ ಅವನು ಅನ್ವಯಿಸುತ್ತಾನೆ. ಅದರ್‌ವೈಸ್ ಅವನ ಹತ್ತಿರ ಬೋರ್ ಇದ್ದು ಡ್ರೈ ಆಗಿ ಬೋರ್ ಫಂಕ್ಷನ್ ಆಗದಿದ್ದರೆ ಅವರು ಈ ವ್ಯಾಪ್ತಿಗೆ ಬರುವುದೇ ಇಲ್ಲ.

ಶ್ರೀ ಬಿ. ಎಸ್. ಯಡಿಯೂರಪ್ಪ:– ಸರ್ವೆ ಮಾಡಬೇಕಾದರೆ ಇವುಗಳನ್ನೆಲ್ಲಾ ಯಾರು ನೋಡುತ್ತಾರೆ ಸಾರ್? ನಿಮ್ಮಲ್ಲಿ ಒಂದು ವಿನಂತಿ, ನೀವು ಒಂದು ನಿಮಿಷ ಈಲ್ಡ್ ಆಗಿ ಸಾರ್. ನಾನು ಮಧ್ಯೆ ಎದ್ದು ಮಾತನಾಡುತ್ತಿದ್ದೇನೆ. ನಿಮ್ಮಲ್ಲಿ ವಿನಂತಿ, ಒಂದು ನಿಮಿಷ ತಾವು ಈಲ್ಡ್ ಆಗಬೇಕು. ಮಾನ್ಯ ಅಧ್ಯಕ್ಷರೆ, ನಾನೇನು ಹೇಳುತ್ತೇನೆ ಎಂದರೆ ದಯಮಾಡಿ ಇಲ್ಲಿ ಎಸ್‌ಸಿ: ಎಸ್‌ಟಿ ಎಂದು ತರಬೇಡಿ. ಎರಡು ಹೆಕ್ಟೇರ್ ಎಂದು ಏನು ತಾವು ಮಾಡಿದ್ದೀರಿ ಅದು ನೀರಾವರಿ ಪ್ರದೇಶವಾಗಿದ್ದರೆ ನಮ್ಮದೇನೂ ಅಭ್ಯಂತರವಿಲ್ಲ. ಯಾವುದೇ ಸರ್ಕಾರ ಇದ್ದರೂ ಕೂಡ ಜವಾಬ್ದಾರಿಯಿಂದ ಕೆಲಸಮಾಡಬೇಕಾಗುತ್ತದೆ. ನಾವು ಇಲ್ಲಿ ಕುಳಿತು ಹಗುರವಾಗಿ ಹೇಳುವುದಕ್ಕಾಗುವುದಿಲ್ಲ. ಎರಡು ಹೆಕ್ಟೇರ್ ಹೊಂದಿರುವಂತಹ ಯಾವುದೇ ವ್ಯಕ್ತಿ ಒಂದು ಬೋರ್‌ವೆಲ್ ಅನ್ನು ಹಾಕಿಕೊಂಡಿದ್ದರೆ ಅವನಿಗೆ ಸಿಗುವುದಿಲ್ಲ. ಒಬ್ಬರು ಅಂಗನವಾಡಿ ಕಾರ್ಯಕರ್ತೆ ಇದ್ದರೂ ಕೂಡ ಅವರಿಗೆ ಈ ಸವಲತ್ತುಗಳು ಸಿಗುವುದಿಲ್ಲ. ಅವರೇನು ಶ್ರೀಮಂತರೆ? ನೀರಗಂಟೆ ಅವನಿಗೆ 1000 ರೂಪಾಯಿ ಸಿಗುತ್ತದೆ ತಿಂಗಳಿಗೆ ಎಂದರೆ ಅವನಿಗೂ ಈ ಸವಲತ್ತು ಸಿಗುವುದಿಲ್ಲ.

ಶ್ರೀ ಹೆಚ್. ಎಸ್. ಮಹದೇವಪ್ರಸಾದ್:– ಮಾನ್ಯ ಅಧ್ಯಕ್ಷರೇ, ತಾವು ಸ್ವಲ್ಪ ಗಮನಿಸಬೇಕು. ಒಟ್ಟಾರೆ ಸಮೀಕ್ಷೆ ಸಂದರ್ಭದಲ್ಲಿ, ಮೇಲೆ ಹೇಳಿರತಕ್ಕಂಥ ಎಂಟು ಮಾನದಂಡಗಳು ಏನಿವೆ, ಅದರಲ್ಲಿ ಒಂದು ಅಂಶ ಯಾವುದಾದರೂ ಇದ್ದು, ಅದರ ವ್ಯಾಪ್ತಿಗೆ ಒಳಪಟ್ಟಿದ್ದರೂ ಕೂಡ, ಅವನ ಜೀವನ ಮಟ್ಟ ಹೇಗಿದೆ, ಅವನು ಬಡತನದಲ್ಲಿ ಜೀವನ ನಿರ್ವಹಿಸುತ್ತಿದ್ದಾನೆ ಎಂದು ಕಂಡುಬಂದರೆ ಅವನನ್ನು ನೀವು ಕನ್ಸಿಡರ್ ಮಾಡಿ ಎಂದು ಎಲ್ಲಾ ಸಮೀಕ್ಷೆ ತಂಡಗಳಿಗೆ ಸೂಚನೆಯನ್ನು ಕೊಟ್ಟಿದ್ದೇವೆ.

ಶ್ರೀ ಆರಗ ಜ್ಞಾನೇಂದ್ರ:– ಕೊನೇ ಕ್ಲಾಜ್ ಅನು ಸರಿಯಾದ ರೀತಿಯಲ್ಲಿ ವಿಶ್ಲೇಷಣೆ ಮಾಡಿ. ಅಧಿಕಾರಿಗಳಿಗೆ ಇದು ಅರ್ಥವಾಗುವುದಿಲ್ಲ.

ಶ್ರೀ ಹೆಚ್. ಎಸ್. ಮಹದೇವಪ್ರಸಾದ್:– ಇಲ್ಲ, ನಾವು ಎಲ್ಲಾ ಹೇಳಿದ್ದೇವೆ ಸಾರ್. ನಮ್ಮ ಸರ್ವೇ 28 ತಾರೀಖಿನಿಂದ ಪ್ರಾರಂಭವಾಗುವುದು ಎಂದು ನಿಗದಿಪಡಿಸಿದ್ದರೂ ಕೂಡ, ದಿನಾಂಕ 25 ಹಾಗೂ 26 ರಂದು ಸದನ ಇಲ್ಲದೆ ಇರುವಂತಹ ಸಂದರ್ಭದಲ್ಲಿ ಪ್ರತಿ ಕ್ಷೇತ್ರದಲ್ಲಿ ಆಯಾಯ ಶಾಸಕರನ್ನು ಸಂಪರ್ಕ ಮಾಡಿ, ಸಂಬಂಧಿಸಿದ ತಹಸೀಲ್ದಾರ್ ಹಾಗೂ ನಮ್ಮ ಆಹಾರ ಇಲಾಖೆಯವರು, ತಮ್ಮ ಮುಖಾಂತರ ಒಂದು ಫಾರ್ಮೇಟ್ ಅನ್ನು, ತಾವು ಯಾವ ಗ್ರಾಮದಲ್ಲಿ ಸೂಚಿಸುತ್ತೀರಿ, ಆ ಗ್ರಾಮದಲ್ಲಿ ತಮ್ಮ ನೇತೃತ್ವದಲ್ಲಿ ಆಫಾರ್ಮೆಟ್ ಅನ್ನು ಭರ್ತಿ ಮಾಡಿಸುವ ಮುಖಾಂತರ ಈ ಸರ್ವೇ ಕಾರ್ಯವನ್ನು ಚಾಲೂ ಮಾಡಬೇಕೆಂದು ಹೇಳಿ ಇಡೀ ನಮ್ಮ ರಾಜ್ಯಾದಂತ.

ಶ್ರೀ ಎ. ಕೃಷ್ಣಪ್ಪ (ವರ್ತೂರು):– ಮಾನ್ಯ ಅಧ್ಯಕ್ಷರೆ, ಈಗ ಗ್ರಾಮೀಣ ಪ್ರದೇಶಕ್ಕೆ ಸಂಬಂಧಪಟ್ಟ ಹಾಗೆ ಹೆಕ್ಟೇರ್ಸ್ ಹಾಗೂ ಎಕರೆಗಳ ಬಗ್ಗೆ ಮಾತನಾಡುತ್ತಿದ್ದೀರಿ. ಪಟ್ಟಣ ಪ್ರದೇಶಗಳಲ್ಲಿ ಸ್ಲಮ್‌ಗಳಲ್ಲಿ ಇರುವವರು ಹೆಕ್ಟೇರ್‌ಗಳನ್ನು ನಿಮಗೆ ತೋರಿಸುವುದಕ್ಕೆ ಆಗುವುದಿಲ್ಲ.

ಶ್ರೀ ಹೆಚ್. ಎಸ್, ಮಹದೇವಪ್ರಸಾದ್:– ಅವರಿಗೆ ಬೇರೆ ರೀತಿ ಇದೆ.

ಶ್ರೀ ಎ. ಕೃಷ್ಣಪ್ಪ:– ಹೋದ ಬಾರಿ ಹಿಂದಿನ ಸರ್ಕಾರ ಇದ್ದಾಗ ನಾವು, ಬಡವನು ಎಲ್ಲೇ ಇರಲಿ ಅದು ಸೋಟಿಫೈಡ್ ಏರಿಯಾ, ಕಾಲೋನಿಗಳಲ್ಲಿ ಇರಲಿ, ಅನ್‌ರೆಕಗ್ನೈಸ್ಡ್ ಕಾಲೋನಿ ಇರಲಿ ಅಥವಾ ಸ್ಲಮ್ ಕ್ಲಿಯರೆನ್ಸ್ ಬೋರ್ಡ್ ಲಿಮಿಟ್ಸ್‌ನಲ್ಲಿ ಇರಲಿ ಅಥವಾ ಆ ಲಿಮಿಟ್‌ನಿಂದ ಹೊರಗಡೆ ಇರಲಿ ಬಡವ ಎಂದು ಪ್ರೂವ್ ಆದರೆ ಅಂತಹವರಿಗೆ ಕೊಡಬೇಕೆಂದು ಹೇಳಿದ್ದೆವು. ಈಗ ನೀವು ಲಾಸ್ಟ್ ಪ್ಯಾರಾ ಇಂಟರ್‌ಪ್ರಿಟೇಷನ್ ಕೊಡುತ್ತಿದ್ದೀರಿ. ನಿಮ್ಮ ಆಫೀಸರ್ಸ್ ಆ ಇಂಟರ್‌ಪ್ರಿಟೇಷನ್ ಅನ್ನು ಒಪ್ಪಿಕೊಳ್ಳಬೇಕಲ್ಲಾ. ಅವರು ಒಪ್ಪಿಕೊಳ್ಳುವುದಿಲ್ಲ. ಸರ್ವೆ ಮಾಡುವಾಗ ನಾವು ಜೊತೆಯಲ್ಲಿದ್ದವರು ಹೇಳುತ್ತೇವೆ, 58 ಸಾವಿರ ಕುಟುಂಬಗಳನ್ನು ಗುರುತು ಮಾಡಿ ಕೊನೆಯಲ್ಲಿ ಅವರಲ್ಲಿ ಕಾಲುಭಾಗ ಕುಟುಂಬಗಳಿಗೆ ಕೂಡ ಕಾರ್ಡು ಕೊಡಲಿಲ್ಲ. ಅದಕ್ಕಾಗಿ ನೀವು ರೂರಲ್ ಸೆಕ್ಟರ್‌ನಲ್ಲಿ ನೀವು ಲ್ಯಾಂಡ್ ಆಧಾರದ ಮೇಲೆ ಕೊಡುತ್ತೀರೋ, ಏನು ಮಾಡುತ್ತೀರೋ ನೋಡಿ. ಆದರೆ ಸಿಟಿ ಲಿಮಿಟ್ಸ್‌ನಲ್ಲಿ ಮುನ್ಸಿಪಲ್ ಲಿಮಿಟ್ಸ್, ಸಿಎಂಸಿ ಲಿಮಿಟ್ಸ್, ಕಾರ್ಪೊರೇಷನ್ ಲಿಮಿಟ್ಸ್‌ನಲ್ಲಿ ನೀವು ಇನ್‌ಕಂ ಇಡಬೇಕಾಗುತ್ತದೆ. ಆ ರೀತಿ ಇನ್‌ಕಂ ಇಡುವಾಗ 12 ಸಾವಿರ ರೂಪಾಯಿ ಲಿಮಿಟ್ಸ್ ಇಟ್ಟರೆ ಅದು ಜನರಿಗೆ ಸಹಾಯವಾಗುವುದಿಲ್ಲ. ಈಗ ಮನೆಯಲ್ಲಿ ಪಾತ್ರೆ ತೊಳೆಯುವವರಿಗೆ 12 ಸಾವಿರ ರೂಪಾಯಿ ಕೊಡುತ್ತಾರೆ. ಶಾಲೆಯಲ್ಲಿರುವ ಆಯಾಗೆ ಮಕ್ಕಳನ್ನು ಕರೆದುಕೊಂಡು ಹೋಗಿ ಬಿಟ್ಟು ಬರುವುದಕ್ಕೆ 1,500 ರೂಪಾಯಿ ಕೊಡುತ್ತಾರೆ ನೀವು ಆ ಒಂದು ಪ್ಯಾರಾಮೀಟರ್ಸ್ ಹಾಗೂ ರೀಯಾಲಿಟೀಸ್ ಎರಡನ್ನೂ ಹೊಂದಾಣಿಕೆ ಮಾಡಿ ನೋಡದೆ ಇದ್ದರೆ, ನೀವು ಆ ಕಾರ್ಡನ್ನು ಎಕ್ಸ್‌ಟೆಂಡರ್ ಮಾಡುವುದಕ್ಕೆ deserving ಪೀಪಲ್‌ಗೆ ಸಿಗುವುದಿಲ್ಲ. ಅದಕ್ಕಾಗಿ ನೀವು ಡಿಫರೆಂಟ್ ಪ್ಯಾರಾಮೀಟರ್ ಅನ್ನು ಸಿಟಿ ಅರ್ಬನ್ಸ್ ಸೆಮಿ ಅರ್ಬನ್ಸ್ ಮಹಾನಗರ ಪಾಲಿಕೆಗಳು ಹಾಗೂ ರೂರಲ್ ಸೆಕ್ಟರ್ ಅದಕ್ಕೆ ಅನ್ವಯಿಸುವ ಹಾಗೆ ನೀವು ಈ ಮತ್ತು ಕಾನೂನನ್ನು ಫ್ಲೋಟ್ ಮಾಡಬೇಕಾಗುತ್ತದೆ.

ಶ್ರೀ ಹೆಚ್. ಎಸ್. ಮಹದೇವಪ್ರಸಾದ್:– ಮಾನ್ಯ ಅಧ್ಯಕ್ಷರೆ, ಕಾಫಿ ತೋಟದ ಕಾರ್ಮಿಕರು ಕೃಷಿ ಕಾರ್ಮಿಕರು, ಗೇರು ತೋಟದ ಕಾರ್ಮಿಕರು, ಅಡಿಕೆ ತೋಟ ಕಾರ್ಮಿಕರು ಇವರೆಲ್ಲಾ ಏನಿದ್ದಾರೆ, ನಾವು ಅವರುಗಳ ಮನೆಮನೆಗೆ ಸಮೀಕ್ಷೆಗೆ ಹೋಗುವಾಗ, ಅವರುಗಳು ಯಾವುದಾದರೂ ಒಂದು ಗ್ರಾಮದಲ್ಲಿ ವಾಸವಾಗಿರುವಂತಹ ಕುಟುಂಬದ ಸದಸ್ಯರಾಗಿರುತ್ತಾರೆ. ಯಾವುದೇ ಕಾರ್ಮಿಕರಾದರೂ ಕೂಡ ತೋಟದಲ್ಲಿ ಸಂಸಾರ ಮಾಡಿಕೊಂಡು ಅಲ್ಲೇ ಇರುವುದಿಲ್ಲ. ಅಥವಾ ಅವರು ತೋಟಗಳಲ್ಲಿ ಇದ್ದರೂ ಕೂಡ ನಮ್ಮ ಸಮೀಕ್ಷೆ ತಂಡ ಅಲ್ಲಿಗೆ ಹೋದಾಗ, ಅವರ ಹೆಸರು ಯಾವುದೇ ಗ್ರಾಮದಲ್ಲಿ ನೋಂದಾವಣೆಯಾಗಿಲ್ಲ ಎಂದಾಗ, ನಮ್ಮ

ಸಮೀಕ್ಷಾ ತಂಡ ಮತದಾರರ ಪಟ್ಟಿಯನ್ನು ಕೂಡ ಜೊತೆಯಲ್ಲಿ ಇಟ್ಟುಕೊಂಡಿರುತ್ತಾರೆ. ಮತ್ತು ಸರ್ವ ಕುಟುಂಬ ಸಮೀಕ್ಷೆ ಎಂದು ನಮ್ಮ ಗ್ರಾಮೀಣಾಭಿವೃದ್ಧಿ ಇಲಾಖೆಯವರು ಒಂದು ಸರ್ವೇಯನ್ನು ಗ್ರಾಮ ಪಂಚಾಯತ್‌ಗಳ ಮುಖಾಂತರ ಮಾಡಿಸಿದ್ದಾರೆ. ಅದು ಬಹಳ ಅಕ್ಯುರೇಟ್ ಆಗಿದೆ. ಇವೆರಡನ್ನು ಇಟ್ಟುಕೊಂಡು ಅದರ ಜೊತೆಗೆ ಹಳದಿ ಹಾಗೂ ಹಸಿರು ಕಾರ್ಡು ಇವುಗಳನ್ನೂ ಸಹ ಹಿಂದೆ ಇದ್ದದ್ದನ್ನೂ ಕೂಡ ಯಾರ್ಯಾರಿಗೆ ಕೊಟ್ಟಿದ್ದರು ಎನ್ನುವ ಪಟ್ಟಿಯೆಲ್ಲಾ ಇಟ್ಟುಕೊಂಡು ಹಾಗೂ ನೀವು ಮಧ್ಯದಲ್ಲಿ ಐ.ಡಿ. ಸ್ಲಿಪ್ ಕೊಟ್ಟಿರುವಂತಹ ಪಟ್ಟಿಯನ್ನು ಇಟ್ಟುಕೊಂಡು ಪ್ರತಿ ಮನೆಮನೆಗೆ ಹೋದಾಗ, ಆ ಮನೆಯವರನ್ನು ನೋಡಿದಾಗ, ಅವರಿಗೆ ಅರ್ಹತೆ ಇದೆಯಾ ಇಲ್ಲವೋ ಇವರಿಗೆ ಯಾರ ಕಾರ್ಡು ಕೊಟ್ಟಿದ್ದಾರೆ ಹಿಂದೆ ಎಂದು ನೋಡುತ್ತಾರೆ. ಅದರ ಜೊತೆಗೆ ಜನ ಸಮೂಹ ಕೂಡ ಇರುತ್ತದೆ.

ಶ್ರೀ ಬಿ. ಎಸ್. ಯಡಿಯೂರಪ್ಪ:– ನೀವು ಗೈಡ್‌ಲೈನ್ಸ್ ಕೊಟ್ಟಿದ್ದೀರಲ್ಲಾ, ಅದರಲ್ಲಿ ಒಂದು, ಎರಡು, ಮೂರು ಹೀಗೆ ಆ ಒಂದೊಂದು ಅಂಶಗಳನ್ನು ತೆಗೆದುಕೊಂಡು ಏನೇನು ಮಾರ್ಪಾಡು ಆಗಿದೆ ಎಂದು ಕನ್ನಡದಲ್ಲಿ ಅರ್ಥವಾಗುವ ಹಾಗೆ ಹೇಳಿಬಿಡಿ.

ಶ್ರೀ ಹೆಚ್. ಎಸ್. ಮಹದೇವಪ್ರಸಾದ್:– ಈಗ ಯಾವುದೇ ತೋಟದ ಕಾರ್ಮಿಕರಿಗೆ ಈ ಒಂದು ವ್ಯಾಪ್ತಿಗೆ ತರುವುದಕ್ಕೆ ಯಾವ ಅಭ್ಯಂತರನೂ ಇಲ್ಲ. ಅವರು ಎಲಿಜಿಬಲ್ ಇದ್ದಾರೆ. ಆದರೆ ಅವರ ಒಂದು ಆರ್ಥಿಕ ಮಟ್ಟ ಕೂಡ ನೋಡಬೇಕಾಗುತ್ತದೆ. ಸಾಮಾನ್ಯವಾಗಿ ಎಲ್ಲಾ ಕಾರ್ಮಿಕರ ಬಗ್ಗೆ ಹೇಳುವುದಾದರೆ, ನಿನ್ನೆ ಚಿಕ್ಕಮಗಳೂರಿಗೆ ತಾವು ಬಂದಿದ್ದಿರಿ, ನಾನು ಇದೇ ಪ್ರಶ್ನೆಯನ್ನು ಅಲ್ಲಿ ಕೂಡ ಪ್ರಸ್ತಾಪವಾದಾಗ ಸ್ಥಳೀಯ ನಮ್ಮ ಇಲಾಖೆಯ ಅಧಿಕಾರಿಗಳು, ಜಿಲ್ಲಾಧಿಕಾರಿಗಳ ಜೊತೆ ಒಂದು ಘಂಟೆ ಸಭೆಯನ್ನು ಮಾಡಿದಾಗ ಇವರನ್ನೆಲ್ಲಾ ಅದರ ವ್ಯಾಪ್ತಿಗೆ ತರಬೇಕೆಂದು ಹೇಳಿದ್ದೇನೆ. ಇನ್ನು ತಾವು ಫೋನ್ ಮತ್ತು ಮೊಪೆಡ್ ವಿಚಾರ ಏನು ಹೇಳುತ್ತೀರಿ ಅದನ್ನು ಒಂದು ಸಾರಿ ಖರೀದಿ ಮಾಡಿ ಇಟ್ಟುಕೊಳ್ಳುವುದಾಗಿದ್ದರೆ ಅವರಿಗೆ ನಾವು ವಿನಾಯಿತಿ ಕೊಡಬಹುದಾಗಿತ್ತು. ಆದರೆ ಅವರು ಪ್ರತಿ ತಿಂಗಳು 500 ರಿಂದ 1000 ರೂಪಾಯಿ ಖರ್ಚು ಮಾಡುವ ಸಾಮರ್ಥ್ಯ ಇರುವವರೇ ಫೋನ್ ಹಾಗೂ ಮೊಪೆಡ್ ಸ್ಕೂಟರ್ ಇಟ್ಟುಕೊಳ್ಳುವವರು. ಈಗ ನಾವು ಕಾರ್ಡುದಾರರಿಗೆ ಬೆನಿಫಿಟ್ ಕೊಡುವುದು 150 ರೂಪಾಯಿ ಈಗ ನಾವು 9 ರೂಪಾಯಿಗೆ ಒಂದು ಕೆ.ಜಿ. ಅಕ್ಕಿಯನ್ನು ನಾವು ಖರೀದಿ ಮಾಡಿ.

ಶ್ರೀ ಕೆ. ಜಯಪ್ರಕಾಶ್ ಹೆಗಡೆ:– ಮಾನ್ಯ ಅಧ್ಯಕ್ಷರೆ, 200 ರೂಪಾಯಿ ಕೊಟ್ಟರೆ ಸೆಲ್ ಫೋನ್‌ಗೆ ಒಂದು ಕಾರ್ಡ್ ಕೊಡುತ್ತಾರೆ. ಸೆಲ್ ಫೋನ್‌ಗಳನ್ನು ಲೆಕ್ಕಕ್ಕೆ ತೆಗೆದುಕೊಳ್ಳಬಾರದು. ಏಕೆಂದರೆ ಕೆಲಸದವರಿಗೆ ಧಣಿಗಳು ಅವರ ಹೆಸರಿನಲ್ಲಿ ಕೊಟ್ಟಿರುತ್ತಾರೆ. ಇದನ್ನೂ ಕೂಡ ನೀವು ಲೆಕ್ಕ ಹಾಕಿದರೆ ಹೇಗೆ? ಆದುದರಿಂದ ಅವನ ಆದಾಯ ಲೆಕ್ಕ ಹಾಕಿ. ಅವನ ಹತ್ತಿರ ಇರುವಂತಹ ವಸ್ತುಗಳನ್ನು ಲೆಕ್ಕಹಾಕಬೇಡಿ. ಆದಾಯ ಲೆಕ್ಕ ಹಾಕಿ.

ಶ್ರೀ ಎಸ್. ರಾಜೇಂದ್ರನ್:– ಮಾನ್ಯ ಅಧ್ಯಕ್ಷರೆ, ಒಬ್ಬ ಮನುಷ್ಟನಿಗೆ ಕಿವಿ ಕೇಳುವುದಿಲ್ಲ, ಆದ್ದರಿಂದ ಅವನು ಸೆಲ್ ಫೋನ್ ಇಟ್ಟುಕೊಳ್ಳುವುದಿಲ್ಲ, ಆದ್ದರಿಂದ ಅವನು ಎಲಿಜಿಬಲ್ ಎಂದು ಕಾರ್ಡು ಕೊಡುತ್ತೀರಾ?

ಶ್ರೀ ಹೆಚ್. ಎಸ್. ಮಹದೇವಪ್ರಸಾದ್:– ಆ ರೀತಿ ನಾವು ಪ್ರತಿಯೊಂದು ವಿಚಾರದಲ್ಲಿ ಕೆದಕುತ್ತಾ ಹೋದರೆ ಸರ್ವೇ ಮಾಡುವುದಕ್ಕೆ.....

ಶ್ರೀ ಹೆಚ್. ಡಿ. ಬಸವರಾಜ್:– ಮಾನ್ಯ ಅಧ್ಯಕ್ಷರೆ, ಹಾಗಲ್ಲ, ಆತ ಸಂಪಾದನೆ ಮಾಡಿರುವುದರಲ್ಲಿ ಸೇವಿಂಗ್ ಮಾಡಿ ಏನಾದರೂ ಕೊಂಡುಕೊಳ್ಳಬೇಕೆಂದು ತೆಗೆದುಕೊಂಡರೆ ಅದು ತಪ್ಪೆ? ಅವನು ಮೇಲಕ್ಕೆ ಬರಬಾರದು? ನೀವು ಕೊಡುವಂತಹ ಹಸಿರು ಕಾರ್ಡಿಗೋಸ್ಕರ ಅವನು ಸೆಲ್‌ಫೋನ್ ತೆಗೆದುಕೊಳ್ಳಬಾರದೆ?

ಶ್ರೀ ಹೆಚ್. ಎಸ್. ಮಹದೇವಪ್ರಸಾದ್:– ನಾನು ಉತ್ತರ ಕೊಡುತ್ತಿದ್ದೇನೆ. ಮೊಪೆಡ್ ಹೊಂದಿರುವವರು ಅದಕ್ಕೆ ಪೆಟ್ರೋಲ್, ಡೀಸೆಲ್ ಬಳಸಬೇಕಾಗುತ್ತದೆ. ಆದುದರಿಂದ ಅವರು ಕನಿಷ್ಟ ಅದಕ್ಕೆ 500 ರಿಂದ 1000 ರೂಪಾಯಿ ಇಂಧನಕ್ಕೆ ಬಳಸುವಂತಹ ಸಾಮರ್ಥ್ಯ ಇರುವವರೇ ಸಾಮಾನ್ಯವಾಗಿ ಇಟ್ಟುಕೊಂಡಿರುತ್ತಾರೆ. ನಾನು 9 ರೂಪಾಯಿಗೆ ಅಕ್ಕಿಯನ್ನು ಖರೀದಿ ಮಾಡಿ, ಅದರಲ್ಲಿ 6 ರೂಪಾಯಿ ಸಬ್ಸಿಡಿ ಒಂದು ಕೆಜಿಗೆ ಕೊಟ್ಟು ಒಬ್ಬ ಹಳದಿ ಕಾರ್ಡುದಾರನಿಗೆ 150 ರೂಪಾಯಿಗೆ ಸರ್ಕಾರ ಪ್ರತಿ ಕುಟುಂಬಕ್ಕೆ ಪ್ರತಿ ತಿಂಗಳು ಕೊಡುತ್ತೇವೆ. ಆ 150 ರೂಪಾಯಿ ಅನ್ನು ನಾವು ಸಹಾಯ ರೂಪದಲ್ಲಿ ಕೊಡಬೇಕಾದರೆ, ಅವನು ಆ 150 ರೂಪಾಯಿಯನ್ನು ಪಡೆಯುವಂತಹ ಸ್ಥಿತಿಯಲ್ಲಿ ಇರಬೇಕು. ಆದರೆ ಅವನು ಅದಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ದುಡ್ಡನ್ನು ಸ್ಕೂಟರ್‌ಗೋ, ಫೋನ್‌ಗೋ ಖರ್ಚು ಮಾಡಿಕೊಳ್ಳುವಂತಹ ಸಾಮಾರ್ಥ್ಯ ಇದ್ದರೆ, ನಾವು ಈ ಸೌಲಭ್ಯವನ್ನು ಕೊಡುವುದು ಸೂಕ್ತವೇ ಎನ್ನುವುದನ್ನು ನೋಡಿ ತಾವೇ ಸಲಹೆ ಕೊಡಿ. ಮತ್ತು ಕಾಫಿ ತೋಟ, ಅಡಿಕೆ ತೋಟ ಹಾಗೂ ಗೇರು ತೋಟಗಳಲ್ಲಿ ಇರುವಂತಹ ಕಾರ್ಮಿಕರನ್ನು ಈ ವ್ಯಾಪ್ತಿಗೆ ತರುವುದಕ್ಕೆ ಯಾವ ಅಭ್ಯಂತರವೂ ಇಲ್ಲ. ನಾನು ಅದರ ಬಗ್ಗೆ ಎಲ್ಲಾ ಸರ್ವೆ ತಂಡಗಳಿಗೂ ಕೂಡ ತಿಳಿಸಿದ್ದೇವೆ. ತಾವೂ ಕೂಡ ಆ ಕ್ಷೇತ್ರಗಳಲ್ಲಿ ಇರುವ ಶಾಸಕರು ಸಮೀಕ್ಷೆ ಮಾಡುವಂತಹ ಸಂದರ್ಭದಲ್ಲಿ ವ್ಯತ್ಯಾಸಗಳು ಏನಾದರೂ ಕಂಡುಬಂದರೆ ಕೂಡಲೇ ಅದರ ಬಗ್ಗೆ ನನಗೆ ತಿಳಿಸಿದರೆ ನಾನೇ ಖುದ್ದು ಬಂದು ಅದನ್ನು ಸೇರಿಸತಕ್ಕಂಥ ವ್ಯವಸ್ಥೆ ಮಾಡುತ್ತೇನೆ. ಅಲ್ಲಿ ಏನಾಗಿದೆ ಎಂದರೆ ಪಿ.ಎಫ್ ಪಡೆಯುವಂತಹ ಕೆಲವು ಕಾರ್ಮಿಕ ವರ್ಗದವರು ಇದ್ದಾರೆ. ಕೆಲವರು ಕಾಫಿ ತೋಟದವರು ಒಂದು ಕಂಪನಿ ರನ್ ಮಾಡುತ್ತಾ ಮಂಥ್ಲಿ ಸ್ಯಾಲರಿ ಕೊಡುವವರು ಇದ್ದಾರೆ. ಆ ಕಾರ್ಮಿಕರನ್ನು ನಾವು ಇದರಲ್ಲಿ ಒಳಪಡಿಸುವುದಕ್ಕಾಗುವುದಿಲ್ಲ. ಡೈಲಿವೇಜನ್ ಮೇಲೆ ಯಾರು ತೋಟಗಳಲ್ಲಿ ಕೆಲಸ ಮಾಡುತ್ತಾರೆ, ಬಹುಸಂಖ್ಯಾತರು ಅವರೇ ಇದ್ದಾರೆ, ಅವರನ್ನು ಇದರಲ್ಲಿ ಒಳಪಡಿಸುತ್ತೇವೆ. ಇನ್ನೊಂದು ವಿಚಾರ ತಾವು ಅಂತ್ಯೋದಯ ಅನ್ನ ಯೋಜನೆ ಬಗ್ಗೆ ಹೇಳಿದಿರಿ.

ಅದನ್ನು ತಾವು ಕನ್‌ಫ್ಯೂಜನ್ ಮಾಡಿಕೊಂಡಿದ್ದೀರಿ ಎಂದು ನಾನು ತಿಳಿದುಕೊಂಡಿದ್ದೇನೆ. ಅದು ಅನ್ನಪೂರ್ಣ ಯೋಜನೆ.

(ಗೊಂದಲ)

ಶ್ರೀ ಬಿ. ಎ. ಜೀವಿಜಯ:– ಕಾಫಿ ತೋಟದಲ್ಲಿ ಇರುವಂತಹ ಕಾರ್ಮಿಕರು, ಇಂಡಸ್ಟ್ರೀಯಲ್ ಆ್ಯಕ್ಟ್ ಅನುಗುಣವಾಗಿ ಇರುವುದರಿಂದ ಪ್ರೊವಿಡೆಂಟ್ ಫಂಡ್ ಕಟ್ಟಲೇಬೇಕು. ಪ್ರೊವಿಡೆಂಟ್ ಫಂಡ್ ಕಟ್ಟುವವರಿಗೆ ಇದು ಅನ್ವಯಿಸುವುದಿಲ್ಲವೆಂದು ಹೇಳಿದರೆ ಇದು ಕಾಫಿ ತೋಟದ ಕಾರ್ಮಿಕರಿಗೆ ಸಹಾಯವಾಗುವುದಿಲ್ಲ. ಇನ್ನು ಎರಡನೆಯದಾಗಿ ಮಾನ್ಯ ಮಂತ್ರಿಗಳು, ಸಮೀಕ್ಷೆ ಸಂದರ್ಭದಲ್ಲಿ ಮತದಾರರ ಪಟ್ಟಿಯನ್ನು ಹಿಡಿದುಕೊಂಡು ಸರ್ವೇ ಮಾಡುತ್ತೇವೆಂದು ಹೇಳಿದರು. ಮತದಾರರ ಪಟ್ಟಿ ಇಲ್ಲದೆ ಇರುವಂತಹವರಿಗೆ ಕಾರ್ಡು ಕೊಡುವುದಿಲ್ಲವೆ?

ಶ್ರೀ ಹೆಚ್. ಎಸ್. ಮಹದೇವಪ್ರಸಾದ್:– ಕೊಡುತ್ತೇವೆ.

(ಗೊಂದಲ)

ಶ್ರೀ ಎ. ಕೃಷ್ಣಪ್ಪ:– ಕ್ಯಾಜುಯಲ್ ಎಂಪ್ಲಾಯ್ಸ್‌ಗೂ ಕೂಡ ಪಿ.ಎಫ್ ರಿಕವರಿ ಇವತ್ತು ಕಾನೂನು ಇದೆ. ಇ.ಎಸ್.ಐ. ಅಂಡ್ ಪಿ.ಎಫ್., ಇದನ್ನು ನೀವು ಪ್ಯಾರಾಮೀಟರ್ ಆಗಿ ಇಟ್ಟುಕೊಂಡು ಕಾರ್ಡು ಕೊಡುವ ವಿಚಾರವನ್ನು ಮಾಡಬೇಡಿ. ಎಂಟು ತಿಂಗಳು ಕೆಲಸದಲ್ಲಿ ಇಟ್ಟುಕೊಂಡು 9ನೇ ತಿಂಗಳು ಅವನು ಡಿಸ್‌ಕಂಟಿನ್ಯೂ ಆದರೆ ಅವನಿಗೆ ವೇಜಸ್ ಇರುವುದಿಲ್ಲ, ಪಿಎಫ್ ಇರುವುದಿಲ್ಲ ಎಂಪ್ಲಾಯ್‌ಮೆಂಟ್ ಕೂಡ ಇರುವುದಿಲ್ಲ.

ಶ್ರೀ ಬಸವರಾಜ ರಾಯರೆಡ್ಡಿ:– ಮಾನ್ಯ ಸಚಿವರೇ, ಇಲ್ಲಿ ಬಹಳ ಪ್ರಮುಖವಾದದ್ದು, ಮಿನಿಮಮ್ ವೇಜಸ್ ಆ್ಯಕ್ಟ್ ಪ್ರಕಾರ ನೀವು ಈಗ 60 ರೂಪಾಯಿಗಳನ್ನು ಕೊಡುತ್ತೀರಿ. ಇಲ್ಲಿ ಮಿನಿಮಮ್ ವೇಜಸ್ ಆ್ಯಕ್ಟ್ ಪ್ರಕಾರ ಎಂದರೆ ಹನ್ನೆರಂಟು ನೂರು ರೂಪಾಯಿಗಳು ಆಯಿತು. ಅವರೇ ಬಡವರು ಇರುವಾಗ, ನೀವು ಎರಡು ಎಕರೆ, ಮೂರು ಎಕರೆ, ಈ ರೀತಿಯಾಗಿ ಮಾಡುವುದನ್ನು ಒಟ್ಟು.....

ಶ್ರೀ ಬಿ. ಎಸ್. ಯಡಿಯೂರಪ್ಪ:– ಮಾನ್ಯ ಅಧ್ಯಕ್ಷರೇ, ನಾಳೆ ಬೆಳಿಗ್ಗೆ ಸಿಎಲ್‌ಪಿ ಮೀಟಿಂಗ್ ಮಾಡಿ, ಇದಾದಮೇಲೆ ನಾವು ಮಾನ್ಯ ಮುಖ್ಯಮಂತ್ರಿಯವರು ಕರೆದಾಗ ನಾವು ಬರುತ್ತೇವೆ. ಇದು ಅರ್ಧ ಗಂಟೆಯಲ್ಲಿ ಸಮಸ್ಯೆ ಬಗೆಹರಿಯುತ್ತದೆ. ಇದು ಯಾರಿಗೂ ಸಮಾಧಾನವಿಲ್ಲ. ಇಲ್ಲಿ ಇದು ವ್ಯರ್ಥಾ ಚರ್ಚೆಯಾಗುವುದು ಬೇಡ.

ಶ್ರೀ ಹೆಚ್. ಎಸ್. ಮಹದೇವ ಪ್ರಸಾದ್:– ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರೆಲ್ಲರೂ ನಾನು ಉತ್ತರ ಪೂರ್ಣ ಹೇಳುವವರೆಗೂ ಎಲ್ಲರೂ ಸಹಕರಿಸಬೇಕು.

ಶ್ರೀ ಬಿ. ಎಸ್. ಯಡಿಯೂರಪ್ಪ:– ಮಾನ್ಯ ಅಧ್ಯಕ್ಷರೇ, ಅವರು ಸಿಎಲ್‌ಪಿ ಮೀಟಿಂಗ್ ಮಾಡಿ, ಅಲ್ಲಿ ಕನ್ವಿನ್ಸ್ ಮಾಡಿಕೊಂಡು ಇಲ್ಲಿಗೆ ಬರಲಿ, ಎಂದು ನಾನು ಸಲಹೆ ಕೊಡುತ್ತಿದ್ದೇನೆ.

ಅಧ್ಯಕ್ಷರು:– ಮಾನ್ಯ ಉಪ ಮುಖ್ಯಮಂತ್ರಿಯವರೇ, ಈಗ ಮಾನ್ಯ ವಿರೋಧಪಕ್ಷದ ನಾಯಕರು ಏನು ಸಲಹೆ ಕೊಡುತ್ತಾರೆಂದರೆ, ನೀವು ಮೊದಲು ಚರ್ಚೆ ಮಾಡಿ, ಆನಂತರ ಅವರನ್ನು ನೀವು ಕನ್ವಿನ್ಸ್ ಮಾಡಿದರೆ, ಈ ವಿಷಯ ಬೇಗ ಮುಕ್ತಾಯವಾಗುತ್ತದೆಂದು ಹೇಳುತ್ತಿದ್ದಾರೆ. ಇದರಿಂದ ಏನಾಗುತ್ತದೆಂದರೆ ಎಲ್ಲರೂ ಒಂದಲ್ಲ ಒಂದು ಸಲಹೆಯನ್ನು ಕೊಡುತ್ತಾರೆ, ಇಲ್ಲದಿದ್ದರೆ ಇದು ಇವತ್ತು 5 ಗಂಟೆಯಾದರೂ ಇದೇ ವಿಷಯ ಚರ್ಚೆ ಯಾಗುತ್ತಿರುತ್ತದೆ.

ಶ್ರೀ ಸಿದ್ದರಾಮಯ್ಯ:– ಮಾನ್ಯ ವಿರೋಧಪಕ್ಷದ ನಾಯಕರೇ, ತಾವು ದಯಮಾಡಿ ಕುಳಿತುಕೊಳ್ಳಿ.

ಶ್ರೀ ಬಿ. ಎಸ್. ಯಡಿಯೂರಪ್ಪ:– ನಾನು ಹೇಳುವಂಥಾದ್ದು ಜೆಡಿಎಲ್‌ಪಿ, ಸಿಎಲ್‌ಪಿ, ಮೀಟಿಂಗ್ ಕರೆದರೆ, ನಾವು ನಿಮಗೆ ಸಹಕಾರವನ್ನು ಕೊಡುತ್ತೇವೆ. ನಾವು ಮುಖ್ಯಮಂತ್ರಿಯವರು ಸಭೆಯನ್ನು ಕರೆದರೆ ಬರುತ್ತೇವೆ. ಇದು ಇಡೀ ರಾಜ್ಯದ ಬಡವರಿಗೆ ಸಂಬಂಧಪಟ್ಟದ್ದು ಇದು ತರಾತುರಿಯಲ್ಲಿ ಚರ್ಚೆ ಆಗುವಂಥಾದ್ದು ಬೇಡವೆಂದು ಹೇಳುತ್ತೇನೆ.

ಶ್ರೀ ಸಿದ್ದರಾಮಯ್ಯ:– ಆ ರೀತಿ ತರಾತುರಿಯಲ್ಲಿ ಆಗಿಲ್ಲ. ಇದನ್ನು ಬಹಳ ಚೆನ್ನಾಗಿ ಅಧ್ಯಯನ ಮಾಡಿಕೊಂಡು ಬಂದು ಸ್ಟೇಟ್‌ಮೆಂಟ್ ಕೊಟ್ಟಿದ್ದಾರೆ.

ಶ್ರೀ ಬಿ. ಎಸ್. ಯಡಿಯೂರಪ್ಪ:– ನಿಮ್ಮ ಕಡೆ ಇರುವಂತಹ ಸದಸ್ಯರಿಗೆ ಯಾರಿಗಾದರೂ ಇದರ ಬಗ್ಗೆ ತೃಪ್ತಿ ಇದೆಯಾ ಎಂಬುದನ್ನು ಕೇಳಿ.

ಶ್ರೀ ಸಿದ್ದರಾಮಯ್ಯ (ಉಪ ಮುಖ್ಯಮಂತ್ರಿಗಳು):– ಮಾನ್ಯ ಯಡಿಯೂರಪ್ಪನವರೇ, ತಾವು ಕುಳಿತುಕೊಳ್ಳಿ. ಮಾನ್ಯ ಅಧ್ಯಕ್ಷರೇ, ಇಲ್ಲಿ ಬಹಳ ದೀರ್ಘವಾಗಿ ಚರ್ಚೆ ಮಾಡುವಂತಹ, ಬಹಳ ವಿವಾದವಾಗಿರುವಂತಹ ಅಂಶಗಳು ಏನೂ ಇಲ್ಲ. ಮಾನ್ಯ ಯಡಿಯೂರಪ್ಪನವರು ನಿನ್ನೆ ದಿವಸ ವಿಷಯ ಪ್ರಸ್ತಾಪಿಸಿದಾಗ, ಕಾಫಿ ತೋಟದಲ್ಲಿ ಕೂಲಿ ಕೆಲಸ ಮಾಡುವಂತಹ, ಕೃಷಿ ಕಾರ್ಮಿಕರನ್ನು ಎಲಿಜಬಲ್ ಎಂದು ಮಾಡಬೇಕೆಂದು ಹೇಳಿದರು. ಅವರನ್ನು ಎಲಿಜಿಬಲ್ ಎಂದು ಮಾಡಿದ್ದೇವೆ. ಸಂಬಳ ಕೊಡುವವರಿಗೆ ಅಷ್ಟೇ ಅಲ್ಲ, ಬೇರೆಯವರಿಗೂ ಕೊಡುತ್ತೇವೆಂದು ಹೇಳಿದರಲ್ಲಾ, ಅದು ಬೇಡ. ಯಾರಿಗೆ ಎರಡು ಹೆಕ್ಟಾರ್ ಭೂಮಿ ಇದ್ದು, ಪಂಪ್ ಸೆಟ್‌ಗಳು ಇದ್ದರೆ, ಅದನ್ನು ಬೇಡವೆಂದು ಹೇಳಿದ್ದಾರೆ ಅದನ್ನು ಸೇರಿಕೊಂಡಿದೆಯಲ್ಲಾ, ಸೆಲ್ ಫೋನ್ ಇಟ್ಟುಕೊಂಡಿರುವವನು, ಅವನಿಗೆ ಏನು ದುಡ್ಡು ಬರದೇ ಇರಲಿ, ಫೋನ್ ಇಟ್ಟುಕೊಂಡಿ ರುವವನು, ಮೊಬೈಲ್ ಇಟ್ಟುಕೊಂಡಿರುವವನು, ಅವರನ್ನು ನೀವು ಬಹಳ ಕಡು ಬಡವರೆಂದು ಕರೆಯುವುದಕ್ಕೆ ಆಗುವುದಿಲ್ಲ. ಯಾರು ಕಡು ಬಡವ ಅವನಿಗೆ ತಿಂಗಳಿಗೆ 150 ರೂಪಾಯಿಗಳು ಇಲ್ಲಿ ಅಕ್ಕಿಯನ್ನು ತೆಗೆದುಕೊಳ್ಳುವುದರಿಂದ ಸೇವೆ ಆಗುತ್ತದೆ. ಅವನು 20 ಕೆ.ಜಿ. ಅಕ್ಕಿಯನ್ನು ತೆಗೆದುಕೊಳ್ಳುವುದರಿಂದ 150 ರೂಪಾಯಿಗಳು ಸೇವೆ ಆಗುತ್ತದೆ. ಅವನಿಗೆ 150 ರೂಪಾಯಿಗಳನ್ನು ಕೊಡುವುದಕ್ಕೆ ಆಗುವುದಿಲ್ಲ, ಅವನಿಗೆ ಕೊಂಡುಕೊಳ್ಳುವಂತಹ ಶಕ್ತಿ ಇಲ್ಲವೆಂಬ ಕಾರಣಕ್ಕೋಸ್ಕರ

ಅಕ್ಕಿಯನ್ನು ಕೊಡುತ್ತಿರುವಂಥಾದ್ದು. The purpore of the programme is, ಯಾರಿಗೆ ಕೊಂಡು ಕೊಳ್ಳುವುದಕ್ಕೆ ಶಕ್ತಿ ಇಲ್ಲ, ಅವನು ಎರಡು ಹೊತ್ತು ಗಂಜಿ ಕುಡಿಯುವುದಕ್ಕೆ ಸಾಧ್ಯವಾಗುವುದಿಲ್ಲ, ಆ ವ್ಯಕ್ತಿಗೆ ಇದು ತಲುಪಬೇಕೆಂಬ ಉದ್ದೇಶವಿರುವಂಥಾದ್ದು. ಆ ಉದ್ದೇಶದಿಂದಲೇ ಈ ಕಾರ್ಯಕ್ರಮ ಪ್ರಾರಂಭವಾದದ್ದು. 1985ನೇ ಇಸವಿಯಿಂದ ಈ ಕಾರ್ಯಕ್ರಮ ಮುಂದುವರೆದುಕೊಂಡು ಹೋಗುತ್ತಿದೆ. ಇಲ್ಲಿ ಗೊಂದಲವೇನಾಯಿತೆಂದರೆ ಹಸಿರು ಕಾರ್ಡಿನಿಂದ ಹಳದಿಕಾರ್ಡ್ ಮಾಡುವಾಗ, ಕೆಲವು ಹೆಚ್ಚು ಕಡಿಮೆಯಾಗಿದೆ. ಕೆಲವರಿಗೆ ಅರ್ಹರಿಗೆ ತಪ್ಪಿಹೋಯಿತು, ಅನರ್ಹರಿಗೆ ಸಿಕ್ಕಿತ್ತು. ಹದಿನಾಲ್ಕು ಲಕ್ಷ ಕಾರ್ಡ್‌ಗಳಿಗೆ. ಒಂದು ಗುರುತಿನ ಚೀಟಿಯನ್ನು ಕೊಟ್ಟು ಬಿಟ್ಟರು. ಇದೆಲ್ಲಾ ಸೇರಿಕೊಂಡಿತ್ತು. ಇವೆಲ್ಲಾ ಸೇರಿಕೊಂಡಿದ್ದರಿಂದ ಇಲ್ಲಿ ಕಡು ಬಡವರು ಯಾರೂ ಬಿಟ್ಟು ಹೋಗಬಾರದೆಂದೂ 12,000 ರೂಪಾಯಿಗಳು ವರ್ಷಕ್ಕೆ ಆದಾಯವಿರುವವರು, ಅದಕ್ಕಿಂತ ಕೆಳಗಿನ ಆದಾಯವಿರುವವರು, ಅವರು ಯಾರೂ ಬಿಟ್ಟು ಹೋಗಬಾರದು. ಅವರೆಲ್ಲರಿಗೂ ಕಾರ್ಡ್ ಸಿಗಬೇಕೆಂದು, ಮತ್ತೆ ಅವರಿಗೆ ಅಕ್ಕಿಯು ಸಿಗಬೇಕೆಂಬುದು ಮೊದಲನೆಯದು. ಎರಡನೆಯದಾಗಿ ಯಾರೂ ಐದು ಹೆಕ್ಟಾರ್‌ಗಿಂತ ಹೆಚ್ಚು ಭೂಮಿಯನ್ನು ಹೊಂದಿರುತ್ತಾರೆ, ಅವರಿಗೆ ಕಾರ್ಡ್‌ಗಳನ್ನು ಕೊಡಬಾರದೆಂದು ಇದೆ.

ಶ್ರೀ ಹೆಚ್. ಎಸ್. ಮಹದೇವ ಪ್ರಸಾದ್:– ಇಲ್ಲಿ ಐದು ಹೆಕ್ಟಾರ್ ಭೂಮಿ ಇದ್ದು, ಅವರು ಬಡವಬಡವರಾಗಿದ್ದಾರೆಂಬ ಬಗ್ಗೆ, ಸಮೀಕ್ಷೆಯಲ್ಲಿ ಗುರುತಿಸಿದರೆ ಅವರಿಗೆ ಕೊಡಬಹುದು.

ಶ್ರೀ ಜಗದೀಶ್ ಶೆಟ್ಟರ್:– ನಿಮ್ಮ ಅಧಿಕಾರಿಗಳಿಗೆ ಈ ಗೈಡ್ ಲೈನ್ಸ್ ಕೊಡಬಹುದಲ್ಲಾ, ಇದು ಏನೂ ದೊಡ್ಡದಲ್ಲ.

ಶ್ರೀ ಸಿದ್ದರಾಮಯ್ಯ:– ನಿಮ್ಮ ಕೇಂದ್ರ ಸರ್ಕಾರದವರು "ಅನ್ನಪೂರ್ಣ ಯೋಜನೆ" ಎಂದು ಮಾಡಿದರು ಇದಕ್ಕೆ ಯಾವ ಮಾನದಂಡವನ್ನು ಇಟ್ಟುಕೊಂಡು ಕೊಟ್ಟರಿ? ಕರ್ನಾಟಕ ರಾಜ್ಯದಲ್ಲಿ 9 ಲಕ್ಷಕ್ಕೆ ಮಾತ್ರ ಕೊಡುತ್ತೇವೆಂದು ಹೇಳಿ, ಅದನ್ನು ಯಾವ ಮಾನದಂಡದಲ್ಲಿ ಕೊಟ್ಟಿದ್ದೀರಿ? ಆಗಲೂ ಬಡವರ ಹೆಸರನ್ನೇ ತಾನೇ ಹೇಳಿದ್ದು. ಅದಕ್ಕೆ ಏನು ಗೈಡ್ ಲೈನ್ಸ್ ಇತ್ತು? ಈ ಗೈಡ್ ಲೈನ್ಸ್ ಪ್ರಕಾರ 70 ಲಕ್ಷ ಕುಟುಂಬಗಳು ಬಂದಿವೆ. ನಿಮ್ಮ ಗೈಡ್ ಲೈನ್ ಪ್ರಕಾರ 9 ಲಕ್ಷ ಕುಟುಂಬಗಳು ಬಂದಿವೆ. ನೀವು ಇದನ್ನು ಬಡವರಿಗೆ ತಾನೇ ಕೊಟ್ಟಿರುವಂಥಾದ್ದು? ಇದನ್ನು ಶ್ರೀಮಂತರಿಗೆ ಕೊಟ್ಟಿರಾ?

ಶ್ರೀ ಬಿ. ಎಸ್. ಯುಡಿಯೂರಪ್ಪ:– "ಅಂತ್ಯೋದಯ ಅನ್ನ ಯೋಜನೆ"ಯಲ್ಲಿ 9 ಲಕ್ಷ ಕುಟುಂಬಗಳು ಬಂದಿದೆ.

ಶ್ರೀ ಸಿದ್ದರಾಮಯ್ಯ:– ಅದು ಸರಿ, ಅದನ್ನು ನೀವು ಯಾರಿಗೆ ಕೊಟ್ಟಿದ್ದೀರಿ?

ಶ್ರೀ ಬಿ. ಎಸ್. ಯಡಿಯೂರಪ್ಪ:– ಕಡು ಬಡವರಿಗೆ ಕೊಟ್ಟಿದ್ದು.

ಶ್ರೀ ಸಿದ್ದರಾಮಯ್ಯ:– ಕಡು ಬಡವರು ಎಂದರೆ ಯಾರು? ಅದರ ಗೈಡ್ ಲೈನ್ಸ್ ಏನು? ಅದನ್ನು ಹೇಳಿ ನೋಡೋಣ. ಬಡವರಲ್ಲಿ ಬಡವರು ಇದರ ಡೆಫನೇಷನ್ ಏನು? What is the definifion for ಬಡವರಲ್ಲಿ ಬಡವರು?

ಶ್ರೀ ಜಗದೀಶ್ ಶೆಟ್ಟರ್:– ನೀವು 62 ಲಕ್ಷ ಮಾಡಿದ್ದಿರಲ್ಲಾ....

ಶ್ರೀ ಸಿದ್ದರಾಮಯ್ಯ:– ಈಗ ಅದೆಲ್ಲಾ ಬೇಡ, ನಿಮಗೂ ಕೂಡ ಎಲ್ಲಾ ಬಡವರಿಗೆ ಕೊಡುವುದಕ್ಕಾಗಲಿಲ್ಲವೆಂಬುದನ್ನು ಒಪ್ಪಿಕೊಳ್ಳಿ. ಇಲ್ಲಿ ನಾವು ಯಾವುದೇ ಬಡವರಿಗೆ ತಪ್ಪಿ ಹೋಗಬಾರದೆಂದು ಅದನ್ನು ಸೇರಿಸುವಂತಹ ಕೆಲಸವನ್ನು ಮಾಡಿದ್ದೇವೆ. ಇದರಲ್ಲಿ ನೀವು ಮೊಸರಲ್ಲಿ ಕಲ್ಲನ್ನು ಹುಡುಕುವಂತಹ ಕೆಲಸವನ್ನು ಮಾಡುವುದಕ್ಕೆ ಹೊರಟ್ಟಿದ್ದೀರಲ್ಲಾ. ಇದು ಸರಿಯಿಲ್ಲ.

ಶ್ರೀ ಜಗದೀಶ್ ಶೆಟ್ಟರ್:– ಮಾನ್ಯ ಸಿದ್ದರಾಮಯ್ಯನವರೇ, ನೀವು 62 ಲಕ್ಷ ಮಾಡಿದ್ದಿರಲ್ಲಾ, ಅವತ್ತು ಏನು ಗೈಡ್‌ಲೈನ್ಸ್ ಇತ್ತು?

ಶ್ರೀ ಸಿದ್ದರಾಮಯ್ಯ:– ಇಲ್ಲಿ 500 ರೂ. 600 ರೂಪಾಯಿಗಳನ್ನು ಪೆಟ್ರೋಲ್‌ಗೆ ಎಂದು ಖರ್ಚು ಮಾಡುತ್ತಾನೆ. ಅವನಿಗೆ 150 ರೂಪಾಯಿಗಳನ್ನು ಕೊಟ್ಟು ಅಕ್ಕಿಯನ್ನು ಕೊಂಡು ಕೊಳ್ಳುವುದಕ್ಕೆ ಆಗುವುದಿಲ್ಲವೇ? ಉದ್ದೇಶವಿರುವಂಥಾದ್ದು. ನಾವು 62 ಲಕ್ಷ ಮಾಡುವಾಗಲೂ ಇದೇ ಗೈಡ್ ಲೈನ್ಸ್‌ಗಳು ಇತ್ತು.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ಮಾನ್ಯ ಅಧ್ಯಕ್ಷರೇ, ಇವರು ಚುನಾವಣೆಯ ಟೈಮ್‌ನಲ್ಲಿ 14 ಲಕ್ಷ ಜನರಿಗೆ ಬಿಳಿ ಕಾರ್ಡ್‌ಗಳನ್ನು ಕೊಟ್ಟರಲ್ಲಾ, ಅದಕ್ಕೆ ಯಾವ ಗೈಡ್‌ಲೈನ್ ಇತ್ತು? ಆಗ ಓಟು ತೆಗೆದುಕೊಂಡು ಈಗ ಅನ್ಯಾಯವೆಂದರೆ.....

ಮಾನ್ಯ ಸದಸ್ಯರು:– ಮಾನ್ಯ ಅಧ್ಯಕ್ಷರೇ, ಅವರು ಹೇಳುವ ಪ್ರಕಾರ, ಕಾರು ಬಿಟ್ಟು ಎಲ್ಲರಿಗೂ ಕೊಟ್ಟು ಬಿಡಿ. ಮೊಬೈಲ್ ಇರುವವರಿಗೂ ಕೊಡಿ, ಸ್ಕೂಟರ್ ಇರುವವರಿಗೂ ಕೊಡಿ.

ಶ್ರೀ ಬಿ. ಎಸ್. ಯಡಿಯೂರಪ್ಪ:– ಮಾನ್ಯ ಸಿದ್ದರಾಮಯ್ಯನವರೇ, ಕೇಂದ್ರದಲ್ಲಿ ಯಾವುದೇ ಸರ್ಕಾರ ಇರಲಿ, ಅವತ್ತು ರಾಜ್ಯ ಸರ್ಕಾರದಲ್ಲಿ ಕಾಂಗ್ರೆಸ್ ಪಕ್ಷದವರು ಇದ್ದರು. ಇವತ್ತು ಜೆ.ಡಿ.ಎಸ್, ಕಾಂಗ್ರೆಸ್ ಇಬ್ಬರೂ ಒಟ್ಟಿಗೆ ಸರ್ಕಾರವನ್ನು ಮಾಡಿದ್ದೀರಿ. ಇಲ್ಲಿ ಫಲಾನುಭವಿಗಳನ್ನು ಐಡೆಂಟಿಫೈ ಮಾಡುವಂಥವರು ನೀವೇ ತಾನೆ? ಆ ರೀತಿ ಐಡೆಂಟಿಫೈ ಮಾಡಬೇಕಾದರೆ ಬಡವರನ್ನು ಬಿಡಬಾರದೆಂಬ ಉದ್ದೇಶ ಬಿಟ್ಟರೆ ಇನ್ನು ಏನು ಇದೆ? ಇದರಲ್ಲಿ ರಾಜಕಾರಣ ಇದೆಯಾ? ಈಗ ಕಾಫಿ ಪ್ಲಾಂಟರ್ಸ್, ತೋಟಗಾರಿಕೆ, ಕೃಷಿ ಕಾರ್ಮಿಕರು ಕೈಬಿಟ್ಟು ಹೋಗಿತ್ತು. ಈಗ ಚರ್ಚೆ ಮಾಡಿದಾಗ, ಅವರು ಆ ಬೌಕಟ್ಟಿನಲ್ಲಿ ಬಂದರು. ಅದು ಬಿಟ್ಟು ಹೋಗಿತ್ತು, ಈಗ ಅದನ್ನು ಸೇರಿಸಿದ್ದೀರಿ. ಅಲ್ಲವೇ?

ಶ್ರೀ ಸಿದ್ದರಾಮಯ್ಯ:– ಇಲ್ಲ ಮೊದಲೇ ಸೇರಿತ್ತು.

ಶ್ರೀ ಬಿ. ಎಸ್. ಯಡಿಯೂರಪ್ಪ:– ಇಲ್ಲ, ಅದುದರಿಂದ ಈಗ ಯಾರು ಮೊಪೆಡ್ ಮತ್ತೊಂದು ಇದೆ, ಅವನು ಒಂದು ಲೀಟರ್ ಪೆಟ್ರೋಲ್ ಉಪಯೋಗಿಸುವುದಿಲ್ಲ. ಅದು ಎರಡು ಸಾವಿರ, ಮೂರು ಸಾವಿರ ರೂಪಾಯಿಗಳ ಬೆಲೆ ಬಾಳುವುದಿಲ್ಲ. ಇನ್ನು ಟೆಲಿಫೋನ್‌ಗೆ 200 ರೂಪಾಯಿಗಳು ಖರ್ಚು ಆಗುವುದಿಲ್ಲ. ಇವತ್ತು ನಾವು ಮುಂದುವರೆಯುತ್ತಿದ್ದೇವೆ. ಇಂತಹ ಟೈಮ್‌ನಲ್ಲಿ ಅದನ್ನು ರಿಲ್ಯಾಕ್ಸ್ ಮಾಡಿ, ಎಂದು ನಾವು ಹೇಳುತ್ತಿದ್ದೇವೆ.

ಶ್ರೀ ಅರಗಜ್ಞಾನೇಂದ್ರ:– ಮಾನ್ಯ ಉಪ ಮುಖ್ಯಮಂತ್ರಿಯವರೇ, ದಯವಿಟ್ಟು ಗಮನಿಸಬೇಕು. ತಾವು ಬರೀ ಅಕ್ಕಿಗೆ ಮಾತ್ರ ಸೀಮಿತರಾಗಿದ್ದೀರಿ. ನಾನು ನಿನ್ನೆ ಹೇಳಿದ್ದೇನೆ. ಇಲ್ಲಿ ಬರೀ ಅಕ್ಕಿ, ಸೀಮೆ ಎಣ್ಣೆ, ಅಲ್ಲದೇ, ಮಕ್ಕಳಿಗೆ ಉಚಿತವಾಗಿರುವಂತಹ ಎಜ್ಯುಕೇಷನ್, ಮತ್ತೆ ಸರ್ಕಾರಿ ಆಸ್ಪತ್ರೆಗಳಲ್ಲಿ ಉಚಿತವಾಗಿರುವಂತಹ ಟ್ರೀಟ್‌ಮೆಂಟ್, ಇದಕ್ಕೂ ಕಾರ್ಡ್ ಇಲ್ಲದಿದ್ದರೆ ಯೂಸರ್ಸ್ ಚಾರ್ಜ್ ಕೊಡಬೇಕಾಗುತ್ತದೆ. ನಾಳೆ ದಿವಸ ಇವೆಲ್ಲಕ್ಕೂ ಈ ಕಾರ್ಡ್ ಮಾನದಂಡವಾಗುತ್ತದೆ. ಇದು ಕೇವಲ 15 ಕೆ.ಜಿ. ಅಕ್ಕಿಗೆ ಮಾತ್ರವಲ್ಲ. ತಾವು ನಮ್ಮ ತೀರ್ಥಹಳ್ಳಿ ತಾಲ್ಲೂಕಿಗೆ ಬನ್ನಿ, ಅಲ್ಲಿ ಒಬ್ಬ ಕೃಷಿ ಕಾರ್ಮಿಕ ತುಂಬಾ ದೂರ ಅಂದರೆ 3–4 ಕಿ.ಮೀ. ದೂರ ಕೆಲಸಕ್ಕಾಗಿ ಹೋಗಬೇಕು. ಅವನ ದುಡಿಮೆ 40 ರೂಪಾಯಿಗಳು, ಅವನು ಮೊಪೆಡ್ ಇಟ್ಟುಕೊಂಡಿದ್ದಾನೆ. ಅವನಿಗೆ ವಾಹನಕ್ಕೆ ಪೆಟ್ರೋಲ್ ಚಾರ್ಜ್ ಕಳೆದು 25 ರೂ. ನಿಂದ 30 ರೂಪಾಯಿಗಳು ಸಿಗಬಹುದು. ಅವನು ಅವನ ಬದುಕಿಗೋಸ್ಕರ ಇಟ್ಟುಕೊಂಡಿದ್ದಾನೆಯೇ, ವಿನಹ ಲಕ್ಸುರಿಗಲ್ಲ. ನೀವು ಲಕ್ಸುರಿಗೆ ಇಟ್ಟುಕೊಂಡಿರುವವರಿಗೆ ಕೊಡುವುದು ಬೇಡ. ಈ ರೀತಿಯಲ್ಲಿ ಆಲೋಚನೆಯನ್ನು ಮಾಡಬೇಕೆ ಹೊರತು, ನಾವು ಏನು ಶ್ರೀಮಂತರಿಗೆ ಕೊಡಿ, ಎಂದು ಹೇಳುತ್ತೇವಾ?

ಶ್ರೀ ಅಮರೇಗೌಡ ಪಾಟೀಲ್ ಬಯ್ಯಾಪುರ:– ಮಾನ್ಯ ಅಧ್ಯಕ್ಷರೇ, ಕೂಲಿ ಮಾಡುವವರು ಯಾರಾದರೂ ಮೊಪೆಡ್ ಇಟ್ಟುಕೊಳ್ಳುತ್ತಾರಾ? ಎಲ್ಲಿ ಇಟ್ಟು ಕೊಳ್ಳುತ್ತಾರೆ?

(ಗೊಂದಲ)

ಅಧ್ಯಕ್ಷರು:– ಈಗ ಆಹಾರ ಸಚಿವರೇ, ಕ್ಲಾರಿಫಿಕೇಶನ್ ಕೊಡಿ.

ಶ್ರೀ ಅರಗ ಜ್ಞಾನೇಂದ್ರ:– ನಿಮ್ಮ ಎಲ್ಲಾ ಶಾಸಕರು ಒಪ್ಪಿದರೆ ನಮಗೆ ಏನೂ ತೊಂದರೆ ಇಲ್ಲ.

ಶ್ರೀ ಹೆಚ್. ಎಸ್. ಮಹದೇವಪ್ಪ:– ನಾನು ಪೂರ್ತಿ ಉತ್ತರವನ್ನು ಹೇಳುವುದಕ್ಕೆ ತಾವು ಬಿಡುತ್ತಾ ಇಲ್ಲವಲ್ಲಾ...

(ಗೊಂದಲ)

ಶ್ರೀ ಜಿ. ಟಿ. ದೇವೇಗೌಡ (ಹುಣಸೂರು):– ಮಾನ್ಯ ಅಧ್ಯಕ್ಷರೇ, ಈ ಕಾರ್ಯಕ್ರಮಕ್ಕೆ ಸರ್ಕಾರದವರು 720 ಕೋಟಿ ರೂಪಾಯಿಗಳ ಸಬ್ಸಿಡಿಯನ್ನು ಕೊಡುತ್ತಿದ್ದೀರಿ. ಹೊಟ್ಟೆಗಿಲ್ಲದಂಥ ಬಡವರಿಗೆ ಈ ಒಂದು ಕಾರ್ಯಕ್ರಮ ತಲುಪಬೇಕು ಎನ್ನುವುದು ಸರ್ಕಾರದ ಉದ್ದೇಶವಾಗಿದ್ದು,

ಇದಕ್ಕೆ ಇಡೀ ದೇಶದಲ್ಲೇ 720 ಕೋಟಿ ರೂಪಾಯಿಗಳ ಸಬ್ಸಿಡಿಯನ್ನು ಕೊಡುತ್ತಿರುವಂಥ ಸರ್ಕಾರ ಕರ್ನಾಟಕ ರಾಜ್ಯ ಸರ್ಕಾರ ಮಾತ್ರ. ಸರ್ಕಾರದ ಈ ಒಂದು ಬೃಹತ್ ಕಾರ್ಯಕ್ರಮ ರಾಜ್ಯದ ಎಲ್ಲಾ ಬಡವರಿಗೆ ತಲುಪಬೇಕು ಎನ್ನುವುದು ಈ ಸದನದ ಎಲ್ಲಾ ಸದಸ್ಯರ ಬೇಡಿಕೆ. ಈ ಬಗ್ಗೆ ನಿನ್ನೆಯಿಂದಲೂ ಚರ್ಚೆಯಾಗಿದೆ. ಕೃಷಿ ಕಾರ್ಮಿಕರನ್ನು ಇದರಿಂದ ಕೈಬಿಡಬಾರದು, ಅವರಿಗೂ ಹಳದಿ ಕಾರ್ಡ್ ಕೊಡಬೇಕು; ಐದು ಎಕರೆ ಕುಷ್ಕಿ ಜಮೀನು ಇರತಕ್ಕಂಥವರಿಗೆ ಹಳದಿ ಕಾರ್ಡ್ ಕೊಡಬೇಕು, ಐದು ಎಕರೆಗೆ ಒಂದು ಪಂಪ್‌ಸೆಟ್ ಇರುವವರಿಗೆ ಹಳದಿ ಕಾರ್ಡ್ ಕೊಡಬೇಕು ಎನ್ನುವುದನ್ನು ಸರ್ಕಾರ ಸ್ಪಷ್ಟವಾದಂಥ ಒಂದು ಆದೇಶವನ್ನು ಹೊರಡಿಸಬೇಕು, ಗೈಡ್‌ಲೈನ್ಸ್ ಸ್ಪಷ್ಟವಾಗಿರಬೇಕು. ಸಚಿವರು ಏನು ಹೇಳುತ್ತಿದ್ದಾರೆ, 9ನೇ ನಂಬರ್ ಗೈಡ್‌ಲೈನ್ ಪ್ರಕಾರ, ಇಷ್ಟೆಲ್ಲಾ ಇದ್ದೂ ಬಡವರು ಎಂದು ಪರಿಗಣಿಸಿದರೆ, ಅವರಿಗೂ ಕೊಡಬಹುದು ಎಂದು ಸಚಿವರು ಏನು ಹೇಳುತ್ತಿದ್ದಾರೆ ಅದು ಖಂಡಿತವಾಗಿ ಕಾರ್ಯಗತವಾಗುವುದಿಲ್ಲ. ದಯಮಾಡಿ ಅದೊಂದನ್ನು ತೆಗೆದು ಹಾಕಿಬಿಡಿ. ದಯಮಾಡಿ ಒಂದು ಸ್ಪಷ್ಟವಾದಂಥ ಗೈಡ್‌ಲೈನನ್ನು ಹೊರಡಿಸಿ. ಐದು ಎಕರೆ ಖುಷ್ಕಿ ಜಮೀನು, ಐದು ಎಕರೆ ಒಂದು ಪಂಪುಸೆಟ್ಟು, ಕೃಷಿ ಕಾರ್ಮಿಕರು, 12 ಸಾವಿರ ರೂಪಾಯಿಗಳ ಇನ್‌ಕಂ ಎಂದು ತಾವು ಏನು ಹೇಳುತ್ತಿದ್ದೀರಿ, ಇವುಗಳನ್ನು ಆಧಾರವಾಗಿಟ್ಟು ಕೊಂಡೇ ಅಧಿಕಾರಿಗಳು ಮಾಡುವುದು. ಆದ್ದರಿಂದ, ಸ್ಪಷ್ಟವಾದಂಥ ಒಂದು ಗೈಡ್‌ಲೈನನ್ನು ಹೊರಡಿಸಿ. ಇದು ಎಲ್ಲಾ ಬಡವರಿಗೂ ತಲುಪಬೇಕು. ಸರ್ಕಾರ ಏನು ಆದೇಶ ಹೊರಡಿಸುತ್ತದೆ, ಅದನ್ನು ಅಧಿಕಾರಿಗಳು ಜಾರಿಗೆ ತರುತ್ತಾರೆ. ಅದನ್ನು ಮಾಡಿದರೆ ಈ ಕಾರ್ಯಕ್ರಮ ಸರಿಯಾಗಿ ಜಾರಿಗೆ ಬರುತ್ತದೆ. ಇದರಲ್ಲಿ ಯಾರಿಗೂ ಸಂದೇಹ ಬೇಡ. ಸಚಿವರು ಅದನ್ನು ಮಾಡಲಿ ಎಂದು ನಾನು ತಮ್ಮ ಮೂಲಕ ಸಚಿವರಲ್ಲಿ ಮನವಿ ಮಾಡಿಕೊಳ್ಳುತ್ತಿದ್ದೇನೆ.

ಶ್ರೀ ಹೆಚ್. ಎಸ್. ಮಹದೇವ ಪ್ರಸಾದ್ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು):– ಮಾನ್ಯ ಅಧ್ಯಕ್ಷರೇ, ಬಡತನದ ರೇಖೆಗಿಂತ ಕೆಳಗಿರುವ ಕುಟುಂಬಗಳನ್ನು ಗುರುತಿಸತಕ್ಕಂಥ ಮಾನದಂಡಕ್ಕೆ ನಿಗದಿಪಡಿಸಿರುವ ವರಮಾನ ರಾಜ್ಯ ಸರ್ಕಾರ ನಿಗದಿಪಡಿಸಿರುವ ವರಮಾನವಲ್ಲ. ವಾರ್ಷಿಕ ಗ್ರಾಮಾಂತರ ಪ್ರದೇಶಕ್ಕೆ 12 ಸಾವಿರ ರೂಪಾಯಿ, ನಗರ ಪ್ರದೇಶಕ್ಕೆ 17 ಸಾವಿರ ಎಂದು ಕೇಂದ್ರ ಸರ್ಕಾರ ನಿಗದಿ ಮಾಡಿರುವ ವರಮಾನದ ಮಾನದಂಡ ಕೇವಲ ನಮ್ಮ ಈ ಕಾರ್ಡ್ ಒಂದಕ್ಕೇ ಮಾತ್ರವಲ್ಲ, ಎಲ್ಲಾ ರೀತಿಯ ಬಿ.ಪಿ.ಎಲ್. ಫ್ಯಾಮಿಲಿಗಳನ್ನು ಐಡೆಂಟಿಫೈ ಮಾಡಲು ಇದೇ ಮಾನದಂಡವನ್ನು ಕೇಂದ್ರ ಸರ್ಕಾರವು ನಿಗದಿಪಡಿಸಿದೆ. ನಾವೊಬ್ಬರು ವರಮಾನವನ್ನು ಬಿಪಿಎಲ್ ಹೆಸರಿನಲ್ಲಿ ಹೆಚ್ಚಿಗೆ ತೋರಿಸಲು ಅವಕಾಶವಾಗುವುದಿಲ್ಲ. ನನ್ನ ವೈಯಕ್ತಿಕ ಅಭಿಪ್ರಾಯದಲ್ಲಿ ಹೇಳುವುದಾದರೆ, ಬಿಪಿಎಲ್ ಎನ್ನುವ ಪದವನ್ನೇ ತೆಗೆದು ಹಾಕಿ, ಬಡವರನ್ನು ಗುರುತಿಸುವ ಕೆಲಸ ಎಂದು ಮಾಡಬೇಕು. ಬಿಪಿಎಲ್ ಎನ್ನುವ ನಾಮಾಂಕಿತದಲ್ಲಿ ನಾವು ಇದನ್ನು ಗುರುತಿಸುತ್ತಿರುವುದರಿಂದ, ಕೇಂದ್ರ ನಿಗದಿಪಡಿಸಿರುವ ವರಮಾನವನ್ನು ನಮ್ಮ ಕಾಲಂನಲ್ಲಿ ಮೆನ್‌ಷನ್ ಮಾಡಿದ್ದೇವೆ. ಇವತ್ತು ಒಬ್ಬ ಕನಿಷ್ಟ ಕೆಲಸ ಮಾಡುವವನಿಗೂ ಕೂಡ

ವಾರ್ಷಿಕ 12 ಸಾವಿರ ರೂಪಾಯಿ ವರಮಾನ ಬರುತ್ತದೆ. ಒಂದು ಕುಟುಂಬದ ವರಮಾನ ಎಂದು ನಾವು ಹೇಳುವುದು. ಒಂದು ಮನೆಯಲ್ಲಿ ಮೂರು ಜನ ಕೆಲಸ ಮಾಡಿದರೆ ಆ ವರಮಾನ ಎರಡರಷ್ಟು, ಮೂರರಷ್ಟು ಆಗುತ್ತದೆ ಎನ್ನುವುದನ್ನೆಲ್ಲಾ ನಾವು ಇಲ್ಲಿ ವಿವರವಾಗಿ ಹೇಳುವುದಕ್ಕೆ ಹೋಗಿಲ್ಲ. ಮಾನ್ಯ ವಿರೋಧ ಪಕ್ಷದ ನಾಯಕರಿಗೆ ನಾನು ತಮ್ಮ ಮುಖಾಂತರ ಗಮನಕ್ಕೆ ತರುವುದೇನೆಂದರೆ. 'ಅನ್ನಪೂರ್ಣ' ಯೋಜನೆ ಕೇಂದ್ರ ಸರ್ಕಾರ ಜಾರಿಗೊಳಿಸಿರುವಂಥ ಒಂದು ಯೋಜನೆ. ಇದನ್ನು ಐದು ವರ್ಷದ ಹಿಂದೆಯೇ ನಮ್ಮ ರಾಜ್ಯದಲ್ಲಿ ಜಾರಿಗೆ ಕೊಟ್ಟಿದ್ದೇವೆ. ಈ ಯೋಜನೆಯ ಪ್ರಯೋಜನವನ್ನು ಪಡೆಯಲು ಫಲಾನುಭವಿಗೆ 65 ವರ್ಷಕ್ಕಿಂತ ಹೆಚ್ಚು ವಯಸ್ಸು ಇರಬೇಕು, ನಿರ್ಗತಿಕನಾಗಿರಬೇಕು ಮತ್ತು ಸರ್ಕಾರದ ಯಾವುದೇ ಮಾಸಾಶನ ಪಡೆಯುತ್ತಿರಬಾರದು ಎಂದು ಹೇಳುತ್ತಾರೆ. ಅಂಥವರಿಗೆ 10 ಕೆ.ಜಿ. ಅಕ್ಕಿಯನ್ನು ಉಚಿತವಾಗಿ ನೀಡಬೇಕು ಎನ್ನುವುದು ಈ 'ಅನ್ನಪೂರ್ಣ' ಯೋಜನೆಯ ಮುಖ್ಯ ಅಂಶ. ಇದರಲ್ಲಿ ನಮ್ಮ ರಾಜ್ಯಕ್ಕೆ 68 ಸಾವಿರ ಗುರಿಯನ್ನು ನೀಡಿದ್ದಾರೆ. ಇದನ್ನು ಗುರುತಿಸುವುದು ನಮ್ಮ ಇಲಾಖೆಗೆ ಕಷ್ಟವಾದ ಕೆಲಸ. 65 ವರ್ಷ ಮೀರಿದಂಥ ಯಾವುದೇ ಒಬ್ಬ ನಿರ್ಗತಿಕ ಓಲ್ಡ್ ಏಜ್ ಪೆನ್‌ಷನ್ ಪಡೆಯುತ್ತಿರುತ್ತಾನೆ ಅಥವಾ ಇನ್ಯಾವುದಾದರೂ ಸೌಲಭ್ಯ ಅಥವಾ ಹಳದಿ ಪಡಿತರ ಚೀಟಿಯ ಸೌಲಭ್ಯವನ್ನು ಪಡೆಯುತ್ತಿರುತ್ತಾನೆ. ಅಂಥವರಿಗೆ ನಾವು 10 ಕೆ. ಜಿ. ಅಕ್ಕಿಯನ್ನು ಕೊಡಲು ಹೋದರೆ ಯಾರೂ ತೆಗೆದುಕೊಳ್ಳಲು ಬರುವುದಿಲ್ಲ. ಏಕೆಂದರೆ, ಅವರಿಗೆ ಈ 10 ಕೆ.ಜಿ. ಅಕ್ಕಿಯಿಂದ 30–40 ರೂಪಾಯಿ ಸಿಗಬಹುದು. ಅವರು ಏನು ಮಾಡುತ್ತಾರೆಂದರೆ, 100 ರೂಪಾಯಿಗಳ ಓಲ್ಡ್ ಏಜ್ ಪೆನ್‌ಷನ್ನನ್ನೂ ತೆಗೆದುಕೊಳ್ಳುತ್ತಾರೆ, ಹಳದಿ ಕಾರ್ಡ್‌ನಲ್ಲಿ ಅಥವಾ ಅಂತ್ಯೋದಯ ಅನ್ನ ಯೋಜನೆಯಲ್ಲಿ 28 ಕೆ.ಜಿ. ಅಕ್ಕಿ ಮತ್ತು 7 ಕೆ.ಜಿ. ಗೋಧಿಯನ್ನು ಮೂರು ರೂಪಾಯಿ ದರದಲ್ಲಿ ಪಡೆಯುತ್ತಾರೆ. ಆದ್ದರಿಂದ, ಅವರಿಗೆ ಹೆಚ್ಚು ಅನುಕೂಲ ಬೇರೆ ಯೋಜನೆಗಳಲ್ಲಿ ಆಗುವುದರಿಂದ, ಕೇಂದ್ರ ಸರ್ಕಾರದವರು ಮಾಡಿರುವ 'ಅನ್ನಪೂರ್ಣ' ಯೋಜನೆಯನ್ನು ಅವರ ಗೈಡ್‌ಲೈನ್ಸ್ ಪ್ರಕಾರ ಕಾರ್ಯರೂಪಕ್ಕೆ ತರುವುದಕ್ಕೆ ಸಾಧ್ಯವಾಗುತ್ತಿಲ್ಲ. ಅದಕ್ಕೋಸ್ಕರ ನಾವು, ಈ ಯೋಜನೆಯಲ್ಲಿ ನಿಮ್ಮ ಗೈಡ್‌ಲೈನ್ಸ್ ಅರ್ಹ ಫಲಾನುಭವಿಗಳು ಸಿಗುತ್ತಿಲ್ಲ, ಇದನ್ನು ಬದಲಾವಣೆ ಮಾಡಿಕೊಡಬೇಕು ಎಂದು ನಾವು ಈಗಾಗಲೇ ಕೇಂದ್ರ ಸರ್ಕಾರಕ್ಕೆ ಪತ್ರ ಬರೆದಿದ್ದು, ಅದನ್ನು ಸ್ವಲ್ಪ ರಿಲ್ಯಾಕ್ಸ್ ಮಾಡಿಕೊಡಬೇಕು ಎಂದು ಪತ್ರ ಬರೆದಿದ್ದೇನೆ. ಅದು ಬಂದ ಮೇಲೆ ಆ ಯೋಜನೆಯನ್ನು ಜಾರಿಗೊಳಿಸುತ್ತೇವೆ, ಸಧ್ಯಕ್ಕೆ ಆ ಯೋಜನೆಯನ್ನು ಇನ್ನೂ ನಾವು ಜಾರಿಗೊಳಿಸಿಲ್ಲ. ಇವತ್ತು ನಮ್ಮ ರಾಜ್ಯದಲ್ಲಿ ಒಂದು ಕೋಟಿ, ಎರಡು ಲಕ್ಷ ಕುಟುಂಬಗಳು ಅಂತ್ಯೋದಯ ಅನ್ನ ಯೋಜನೆಗೆ ಅರ್ಹ ಇವೆ ಎಂದು 2001ನೇ ಸಾಲಿನ ಜನಗಣತಿಯ ಅಂಕಿಅಂಶಗಳು ಹೇಳುತ್ತಿವೆ. ಅದರಲ್ಲಿ ನಆವು, 61 ಲಕ್ಷ ಕುಟುಂಬಗಳಿಗೆ ರಾಜ್ಯ ಸರ್ಕಾರದ ಸಹಾಯಧನದಲ್ಲಿ ಹಳದಿ ಪಡಿತರ ಚೀಟಿ ಕೊಡತಕ್ಕಂಥಾದ್ದು ಮತ್ತು ಒಂಭತ್ತೂವರೆ ಲಕ್ಷ ಕುಟುಂಬಗಳಿಗೆ ಕೇಂದ್ರ ಸರ್ಕಾರದ ಅಂತ್ಯೋದಯ ಅನ್ನ ಯೋಜನೆ ಸೇರಿ ಒಟ್ಟು 70 ಲಕ್ಷ ಕುಟುಂಬಗಳಿಗೆ ನಾವು ಪಡಿತರ ವಿತರಣೆ

ಮಾಡುತ್ತಿದ್ದೇವೆ. ಕೇಂದ್ರ ಸರ್ಕಾರ ನಮ್ಮ ರಾಜ್ಯದಲ್ಲಿ 31 ಲಕ್ಷದ 29 ಸಾವಿರ ಕುಟುಂಬಗಳನ್ನು ಬಡತನದ ರೇಖೆಗಿಂತ ಕೆಳಗಿರುವ ಕುಟುಂಬಗಳು ಎಂದು ಗುರುತಿಸಿದ್ದಾರೆ. ತಾವು ಹೇಳುವ ರೀತಿಯಲ್ಲಿ ಹೋದರೆ, ಈ 31 ಲಕ್ಷದ 29 ಸಾವಿರ ಕುಟುಂಬಗಳಿಗೆ ಮಾತ್ರ ನಾವು ನಿಗದಿಪಡಿಸಬೇಕಾಗುತ್ತದೆ. ಆದರೆ ನಮ್ಮ ಸರ್ಕಾರ ಏನು ನಿರ್ದೇಶನ ಕೊಟ್ಟಿದೆ ಎಂದರೆ, ಗ್ರಾಮೀಣ ಪ್ರದೇಶದಲ್ಲಿ ಒಟ್ಟಾರೆ ಶೇಕಡಾ 60ಕ್ಕೆ ಮೀರದಂತೆ, ನಗರ ಪ್ರದೇಶದಲ್ಲಿ ಒಟ್ಟಾರೆ ಶೇಕಡ 30ಕ್ಕೆ ಮೀರದಂತೆ, ಬಡತನದ ರೇಖೆಗಿಂತ ಕೆಳಗಿರುವ ಕುಟುಂಬಗಳನ್ನು ಗುರುತಿಸಬೇಕು ಎನ್ನುವ ಸೂಚನೆಯನ್ನು ನಾವು ಕೊಟ್ಟಿದ್ದೇವೆ. ಶೇಕಡಾ 60ಕ್ಕಿಂತಲೂ ಜಾಸ್ತಿ ಬಡವರು ನಮ್ಮ ರಾಜ್ಯದಲ್ಲಿದ್ದಾರೆ ಎಂದು ಒಪ್ಪಿಕೊಳ್ಳುವುದಾದರೆ ನಮ್ಮ ರಾಜ್ಯದ ಅಭಿವೃದ್ಧಿ ಆಗಿದೆಯೇ ಇಲ್ಲವೇ ಎನ್ನುವ ಬಗ್ಗೆ ವಿಶ್ಲೇಷಣೆ ಮಾಡಲು ಹೋಗಬೇಕಾಗುತ್ತದೆ. ನಾನು ಸಚಿವನಾದ ಕ್ಷಣದಿಂದಲೂ ಈ ಯೋಜನೆಯ ಸರ್ವೆ ಕಾರ್ಯವನ್ನು ಪೂರ್ಣಗೊಳಿಸಬೇಕು, ಪಾರದರ್ಶಕವಾಗಿರಬೇಕು ಮತ್ತು ಎಲ್ಲಾ ಜನರಿಗೂ ಕೂಡ ಈ ಸಮೀಕ್ಷೆ ಯಾವ ರೀತಿ ನಡೆಯುತ್ತಿದೆ ಎನ್ನುವುದು ಗೊತ್ತಾಗಬೇಕು ಎಂದು ಅಧಿಕಾರಿಗಳಿಗೂ ತರಬೇತಿ ಕೊಟ್ಟು ಇದನ್ನು ಮಾಡಿಸುತ್ತಿದ್ದೇವೆ. ಇನ್ನೂ ಸಕ್ಕರೆಯ ಬಗ್ಗೆ ಕೂಡ ಹೇಳಿದಿರಿ. ಇಷ್ಟು ತಿಂಗಳು ಯಾರೂ ಸಕ್ಕರೆಯನ್ನು ಕೇಳುತ್ತಿರಲಿಲ್ಲ. ಏಕೆಂದರೆ ಸಕ್ಕರೆಯ ಮಾರುಕಟ್ಟೆ ದರ ಮತ್ತು ನಾವು ಪಡಿತರ ವ್ಯವಸ್ಥೆಯಲ್ಲಿ ಕೊಡುತ್ತಿದ್ದಂಥ ಸಕ್ಕರೆಯ ದರ ಒಂದೇ ಇರುತ್ತಿದ್ದುದ್ದರಿಂದ ಪಡಿತರದಲ್ಲಿ ಯಾರೂ ಸಕ್ಕರೆಯನ್ನು ಕೇಳುತ್ತಿರಲಿಲ್ಲ. ಆದರೆ ಸಕ್ಕರೆಗೆ ಮಾರುಕಟ್ಟೆ ಜಾಸ್ತಿಯಾಗಿ, ಒಂದು ಕೆ.ಜಿ.ಗೆ 20–22 ರೂಪಾಯಿಗಳಾದಾಗ ನಮಗೆ ಕಳೆದ ತಿಂಗಳು ನ್ಯಾಯಬೆಲೆ ಅಂಗಡಿಗಳ ಮುಖಾಂತರ ಸಕ್ಕರೆ ಬೇಕು ಎಂದು ಬೇಡಿಕೆ ಬಂದ ತಕ್ಷಣವೇ, ನಾನು ಮಾನ್ಯ ಸಕ್ಕರೆ ಸಚಿವರನ್ನು ಸಂಪರ್ಕ ಮಾಡಿ ಆ ತಿಂಗಳ ಅಲಾಟ್‌ಮೆಂಟನ್ನು ಕೊಡಿಸಿದ್ದೇನೆ. ಕೇಂದ್ರ ಸರ್ಕಾರ ನಮಗೆ ಏನು ಅಲಾಟ್‌ಮೆಂಟ್ ಕೊಟ್ಟಿತ್ತು, ಅದನ್ನು ಎಲ್ಲಾ ಸಕ್ಕರೆ ಕಾರ್ಖಾನೆಗಳಿಂದ ಎತ್ತುವಳಿ ಮಾಡಿ ಪ್ರತಿ ಕಾರ್ಡುದಾರರಿಗೆ ಹದಿಮೂರೂವರೆ ರೂಪಾಯಿಗಳಂತೆ ಒಂದು ಕೆ.ಜಿ. 300 ಗ್ರಾಂಗಳಂತೆ, ಕೇಂದ್ರ ನಿಗದಿಪಡಿಸಿದಂತೆ, ಸಮಾನವಾಗಿ ಎಲ್ಲಾ ಕಾರ್ಡುದಾರರಿಗೂ ಸಕ್ಕರೆ ವಿತರಣೆ ಮಾಡಿದ್ದೇವೆ. ಎಲ್ಲೂ ಸಕ್ಕರೆ ಎತ್ತದೇ ಉಳಿದುಕೊಂಡಿಲ್ಲ, ಸಕ್ಕರೆ ವಿತರಣೆಯಾಗಿದೆ. ಕೇಂದ್ರ ಸರ್ಕಾರ ನಮಗೆ ಪ್ರತಿ ವರ್ಷ ಸೀಮೆಎಣ್ಣೆಯ ಅಲಾಟ್‌ಮೆಂಟನ್ನು ಕಡಿಮೆ ಮಾಡುತ್ತಾ ಬಂದಿದೆ. ಹಾಗಾಗಿ, ನಾವು ಬೇರೆಬೇರೆ ಕ್ಷೇತ್ರಗಳಿಗೆ ಕೊಡುತ್ತಿದ್ದಂಥ ಸೀಮೆಎಣ್ಣೆಯನ್ನು ಕಡಿಮೆ ಮಾಡಿ ಪಡಿತರ ಕಾರ್ಡುದಾರರಿಗೆ ಕೊಡುವಂಥಾದ್ದನ್ನು ಮಾಡುತ್ತಿದ್ದೇವೆ. ಗ್ರಾಮೀಣ ಪ್ರದೇಶದವರಿಗೆ ನಾಲ್ಕು ಲೀಟರ್, ಪಟ್ಟಣ ಪ್ರದೇಶಗಳವರಿಗೆ ಆರು ಲೀಟರ್ ಮತ್ತು ನಗರ ಪ್ರದೇಶಗಳವರಿಗೆ ಎಂಟು ಲೀಟರ್‌ನಂತೆ ಸೀಮೆಎಣ್ಣೆಯನ್ನು ನಾವು ವಿತರಣೆ ಮಾಡುತ್ತಿದ್ದೇವೆ. ಗುಡ್ಡಗಾಡು ಪ್ರದೇಶಗಳಲ್ಲಿ ವಿಶೇಷವಾಗಿ ಎಲೆಕ್ಟ್ರಿಸಿಟಿ ಪ್ರಾಬ್ಲಂ ಇರುತ್ತದೆ, ಅಲ್ಲಿ ದೀಪಕ್ಕೂ ಕೂಡ ಅವರು ಸೀಮೆಎಣ್ಣೆಯನ್ನೇ ಬಳಸುವುದರಿಂದ ಅವರಿಗೆ ಹೆಚ್ಚುವರಿಯಾಗಿ ಎರಡು ಲೀಟರ್ ಸೀಮೆಎಣ್ಣೆಯನ್ನು ಕೊಡಬೇಕು ಎಂದು ತೀರ್ಥಹಳ್ಳಿಯ ಶಾಸಕರು ನಮ್ಮ ಹತ್ತಿರ

ಬಂದು ಚರ್ಚೆ ಮಾಡಿದ ಮೇಲೆ, ನಮ್ಮ ಇಲಾಖೆಯಲ್ಲಿ ಆ ಬಗ್ಗೆಯೂ ಕಾರ್ಯಕ್ರಮ ಹಮ್ಮಿಕೊಂಡಿದ್ದು, ಏಪ್ರಿಲ್ ತಿಂಗಳಿನಿಂದ ಅದನ್ನು ವಿತರಣೆ ಮಾಡಲು ಪ್ರಯತ್ನ ಮಾಡುತ್ತಿದ್ದೇವೆ. ಆ ನಿಟ್ಟಿನಲ್ಲಿ ನಾನು ಸದನ ಮುಗಿದ ನಂತರ ಕೇಂದ್ರದ ಪೆಟ್ರೋಲಿಯಂ ಸಚಿವರನ್ನು ಭೇಟಿ ಮಾಡಿ, ಅವರಿಂದ ಹೆಚ್ಚು ಅಲಾಟ್‌ಮೆಂಟ್ ತರುವ ಪ್ರಯತ್ನವನ್ನು ಮಾಡುತ್ತೇನೆ. ತಾವು ಇನ್ನೂ 2–3 ಕ್ಲಾರಿಫಿಕೇಷನ್ ಕೇಳಿದ್ದೀರಿ. ಎರಡು ಹೆಕ್ಟೇರ್ ಜಮೀನು ಇರತಕ್ಕಂಥಾದ್ದರ ಬಗ್ಗೆಯೂ ನಾವು ಈಗಾಗಲೇ ಸ್ಪಷ್ಟವಾಗಿ ತಿಳಿಸಿದ್ದೇವೆ. ಪಂಪಸೆಟ್ಟು ಹೊಂದಿರತಕ್ಕಂಥ ಎರಡು ಹೆಕ್ಟೇರ್ ಪ್ರದೇಶದ ಒಳಗಿರುವವರಿಗೂ ಕೂಡ ವಿನಾಯಿತಿಯನ್ನು ಷೋಷಣೆ ಮಾಡುತ್ತೇವೆ. ಮತ್ತು ತೋಟದಲ್ಲಿ ಕೆಲಸ ಮಾಡತಕ್ಕಂಥ ಕಾರ್ಮಿಕರ ವಿಚಾರದಲ್ಲಿ ಒಂದು ಅಂಶವನ್ನು ನಾನು ಕ್ಲಾರಿಫೈ ಮಾಡಬೇಕಾಗುತ್ತದೆ. ತೋಟದ ಕಾರ್ಮಿಕರು ಎಂದರೆ ಗಂಡ, ಹೆಂಡತಿ, ಮಗ ಎಲ್ಲರೂ ಕಾರ್ಮಿಕರಾಗಿ ಕೆಲಸ ಮಾಡುತ್ತಿರುತ್ತಾರೆ. ಅವರೆಲ್ಲರಿಗೂ ಒಂದೊಂದು ಕಾರ್ಡ್ ಕೊಡಲು ಬರುವುದಿಲ್ಲ. ಒಂದು ಕುಟುಂಬ ಒಂದು ಪರಿಗಣಿಸಿ, ಅದನ್ನು ಗುರುತಿಸಬೇಕಾದರೆ, ಅವರು ಎಲ್ಲಿ ವಾಸವಿರುತ್ತಾರೋ ಆ ಜಾಗದಲ್ಲೇ ನಾವು ಮಾಡಬೇಕಾಗುತ್ತದೆ. ಅವರು ತೋಟದ ಕಾರ್ಮಿಕರು ಎನ್ನುವ ಕಾರಣಕ್ಕೆ ಅವರಿಗೆ ಕಾರ್ಡನ್ನು ಕೊಡುವುದಿಲ್ಲ ಎನ್ನುವ ವಿಚಾರ ನಮ್ಮಲ್ಲಿ ಇರುವುದಿಲ್ಲ. ಅವರಿಗೆ ನಾವು ಕಾರ್ಡನ್ನು ಕೊಡುವಂಥ ವ್ಯವಸ್ಥೆಯನ್ನು ಮಾಡುತ್ತೇವೆ. ಮೊಪೆಡ್ ಹೊಂದಿರುವವರಿಗೆ ನಾವು ವಿನಾಯಿತಿಯನ್ನು ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ. ಏಕೆಂದರೆ ಅವರು ಪೆಟ್ರೋಲ್ ಕನ್‌ಸಂಪ್‌ಷನ್ ಮಾಡೇ ಮಾಡುತ್ತಾರೆ. ಅವನು ಮಾಡದೆಯೇ ಸುಮ್ಮನೆ ನಮಗೊಂದು ಸ್ಕೂಟರ್ ಇರಬೇಕು, ತಂದೆ ತಾತನ ಕಾಲದ ಒಂದು ಬೈಕ್ ಇದೆ ಅದನ್ನು ನಾವು ಮನೆಯಲ್ಲಿಟ್ಟುಕೊಂಡಿದ್ದೇವೆಂದರೆ.....

ಶ್ರೀ ಬಿ. ಸಿ. ಪಾಟೀಲ್ (ಹಿರೇಕೆರೂರು):– ಮಾನ್ಯ ಅಧ್ಯಕ್ಷರೆ, ಅಶ್ವಶಕ್ತಿಯನ್ನು ಮಾನದಂಡ ಮಾಡಿಕೊಂಡು ಮಾಡಿದರೆ ಉತ್ತಮ ಏಕೆಂದರೆ ಒಂದು ಸಾವಿರ ರೂಪಾಯಿಗಳಿಗೆ ಒಂದು ಸೆಕೆಂಡ್ ಹ್ಯಾಂಡ್ ಲೂನ ಸಿಗುತ್ತದೆ. ಹಳ್ಳಿಗಳಲ್ಲಿ ಒಂದು ಲೀಟರ್ ಪೆಟ್ರೋಲ್ ಹಾಕಿದರೆ 10 ದಿವಸ ಓಡಿಸಬಹುದು. ಆದ್ದರಿಂದ 2 ಅಶ್ವ ಶಕ್ತಿರಿಗಳಿಗಿಂತ ಮೇಲಿರುವ ಗಾಡಿಗಳು, ಗೇರು ಇರುವಂಥ ಗಾಡಿಗಳು ಅಥವಾ ಸ್ಕೂಟರುಗಳು ಈ ರೀತಿ ಮಾಡಿದರೆ ಉತ್ತಮ.

ಶ್ರೀ ಬಸವರಾಜ ರಾಯರೆಡ್ಡಿ:– ಮಾನ್ಯ ಮಂತ್ರಿಗಳಲ್ಲಿ ಮನವಿ ಏನೆಂದರೆ ಟೆಲಿಫೋನ್ ಇವೆಲ್ಲವುಗಳನ್ನು ತೆಗೆದುಬಿಟ್ಟು ದಯಮಾಡಿ income ಆಧಾರದ ಮೇಲೆ ಮಾಡಿ. ಅವನಿಗೆ motor cycle ಇದೆ, ಇವನಿಗೆ phone ಇದೆ ಎಂದು ಮಾಡುವುದಾದರೆ ನಮ್ಮ ಕಡೆ ಹಳ್ಳಿಗೆ ಕೊಡಿ. ನಿಮ್ಮ ಕಡೆ ಹಳ್ಳಿ ಬೇರೆ. ನಮ್ಮ ಕಡೆಯ ಹಳ್ಳಿಗೆ ಬಂದರೆ ನಿಮಗೆ ಗೊತ್ತಾಗುತ್ತದೆ.

ಶ್ರೀ ಎಚ್. ಎಸ್. ಮಹದೇವ ಪ್ರಸಾದ್:– ಮಾನ್ಯ ಅಧ್ಯಕ್ಷರೆ, ನನಗೆ ಮಾನ್ಯ ಸದಸ್ಯರು ಕೇಳುವ ಪ್ರಶ್ನೆ ಅರ್ಥವಾಗುತ್ತಿಲ್ಲ. income ಅನ್ನು ಗುರುತಿಸುವುದು ಯಾರು? Village Accountant certify ಮಾಡಬೇಕು Village Accountant ಬಂದು

ಮನೆಯಲ್ಲಿ ಅವನ ವಾರ್ಷಿಕ ವರಮಾನ ಎಲ್ಲವನ್ನೂ ಅವನು ಸಮೀಕ್ಷೆ ಮಾಡುವುದಕ್ಕಾಗುತ್ತದೆಯೇ? ಈ ಮನೆ ಮನೆ ಸಮೀಕ್ಷೆ ನಾವು ಏನು ಮಾಡುತ್ತಿದ್ದೇವೆ ಇದರಲ್ಲಿಯೇ ಅವನ ವರಮಾನ ಏನಿರಬಹುದೆಂದು ಮೇಲ್ನೋಟಕ್ಕೆ ಕಂಡುಬರುತ್ತದೆ. ಅದರ ಆಧಾರದ ಮೇಲೆ ನಾವು ನಿಗದಿಪಡಿಸುತ್ತೇವೆಂದು ಹೇಳುತ್ತಿದ್ದೇವೆ.

ಶ್ರೀ ಬಸವರಾಜು ರಾಯರೆಡ್ಡಿ:– ಮಾನ್ಯ ಮಂತ್ರಿಗಳು ನಾನು ಹೇಳುವುದನ್ನು ದಯಮಾಡಿ ಗಮನಿಸಬೇಕು. ವಾರ್ಷಿಕ ರೂ.11800 ಯಾರಿಗೆ ಆದಾಯ ಇರುತ್ತದೆ ಅವರನ್ನು ಬಡವರು ಎಂದು ಪರಿಗಣಿಸಬೇಕೆಂದು ಲಖಿಡ್‌ವಾಲಾ ಕಮಿಶನ್ 1994ರಲ್ಲಿ ರೇಕಮೆಂಡ್ ಮಾಡಿತ್ತು. ಈಗ 2005ನೇ ಇಸವಿಯಲ್ಲೂ ನೀವು ವಾರ್ಷಿಕ ಆದಾಯ ರೂ.11800 ಎಂದು ಮಾಡುತ್ತೇವೆಂದರೆ, ಇವತ್ತಿನ inflation rate ನಲ್ಲಿ ರೂ.11000ಕ್ಕೆ ಏನು ಬರುತ್ತದೆ? ದಯವಿಟ್ಟು ನಾನು ಹೇಳುದನ್ನು ಕೇಳಿ.

ಶ್ರೀ ಎಚ್. ಎಸ್. ಮಹದೇವ ಪ್ರಸಾದ್:– ಅದು ಕೇಂದ್ರ ಸರ್ಕಾರದಲ್ಲಿ ತೀರ್ಮಾನ ಮಾಡಿರತಕ್ಕಂಥದ್ದು.

ಶ್ರೀ ಬಸವರಾಜ ರಾಯರೆಡ್ಡಿ:– ಇದು ಕೇಂದ್ರ–ರಾಜ್ಯದ ಪ್ರಶ್ನೆಯಲ್ಲ.

(ಗೊಂದಲ)

ಶ್ರೀ ಎಚ್. ಎಸ್. ಮಹದೇವ ಪ್ರಸಾದ್:– ಕೇಂದ್ರ ಸರ್ಕಾರ ಅದನ್ನು ಮಾರ್ಪಾಡು ಮಾಡದ ಹೊರತು ನಾವು ಅದನ್ನು ಅಳವಡಿಸುವುದಕ್ಕಾಗುವುದಿಲ್ಲ. ಈಗ ನಾವು ಸಮೀಕ್ಷೆ ಮಾಡುತ್ತಿದ್ದೇವೆ. ಒಂದೇ ದಿವಸಕ್ಕೆ ಅದನ್ನು ಹೆಚ್ಚಿಸಿ ಎಂದು ನಾವು ಅವರಿಗೆ ಮನವರಿಕೆ ಮಾಡಿಕೊಡುವುದಕ್ಕಾಗುವುದಿಲ್ಲ.

ಶ್ರೀ ಬಿ. ಎಸ್. ಯಡಿಯೂರಪ್ಪ:– ಮಾನ್ಯ ಅಧ್ಯಕ್ಷರೆ, ನಾನು ಒಂದು ಉತ್ತಮವಾದಂಥ ಸಲಹೆಯನ್ನು ಕೊಟ್ಟೆ. ನಿಮ್ಮ ಕಾಂಗ್ರೆಸ್‌ನ CLP meeting ಹಾಗೂ ಈ ಜೆ.ಡಿ.ಎಲ್.ಪಿ.ನ ನಿಮ್ಮ ಶಾಸಕರ ಮಿಟಿಂಗ್ ಅನ್ನು ಕರೆದು ಒಂದು ಒಮ್ಮತದ ಅಭಿಪ್ರಾಯಕ್ಕೆ ಬನ್ನಿ. ನಾವು ಅದಕ್ಕೆ ಸಹಕಾರ ಕೊಡುವುದಕ್ಕೆ ರೆಡಿ ಇದ್ದೇವೆಂದು ಹೇಳಿದ್ದೆವು. ಈಗ ಆ ಕಡೆ ನಮ್ಮ ಶ್ರೀ ಬಿ. ಸಿ. ಪಾಟೀಲರು ಈ ಕಡೆ ರಾಯರೆಡ್ಡಿಯವರು ಈ ರೀತಿ ಮಾಡಿ ಎಂದು ಹೇಳುತ್ತಿದ್ದಾರೆ. ನಾನು ಹೇಳುವುದೇನೆಂದರೆ, ಇಲ್ಲಿ ರಾಜಕಾರಣ ಅಲ್ಲ ಸರ್. ಇಲ್ಲಿ ಯಾರಿಗೂ ಸಮಾಧಾನವಿಲ್ಲ. ನಮ್ಮ ಕ್ಷೇತ್ರದಲ್ಲಿರುವ ಬಡವರಿಗೆ ಇದರಿಂದ ನ್ಯಾಯ ಸಿಗುವುದಿಲ್ಲ ಎನ್ನುವ ನಮ್ಮ ಒಂದು ಚಿಂತೆಯಾಗಿದೆ. ಎರಡನೆಯದಾಗಿ, ಚುನಾವಣೆಗೆ ಮುನ್ನ ಸಮೀಕ್ಷೆ ಮಾಡಲಾಗಿತ್ತು. ಹಾಗಾಗಿ ಇನ್ನೊಂದು ಸಮೀಕ್ಷೆ ಏಕೆ ಬೇಕಾಗಿತ್ತು? ಇನ್ನೊಂದು ಸಮೀಕ್ಷೆ ಏಕೆ ಬೇಕಾಗಿತ್ತೆಂದರೆ, ಕೆಲವು ಅರ್ಹ ಫಲಾನುಭವಿಗಳ ಕೈ ಬಿಟ್ಟುಹೋಗಿತ್ತು. ಅವರ ಹೆಸರನ್ನು ತೆಗೆದುಕೊಂಡು Verify ಮಾಡಿದ್ದರೆ ಖರ್ಚಿಲ್ಲದೆ 8 ದಿವಸಗಳಲ್ಲಿ ಆ ಸರ್ವೆಯನ್ನು ಮಾಡಿ ಮುಗಿಸಬಹುದಾಗಿತ್ತು. ನೀವೇನು ಈಗ ಹೊಸ ವ್ಯವಸ್ಥೆಯನ್ನು ಮಾಡುತ್ತೇನೆಂದು ಹೇಳುತ್ತಿದ್ದೀರಿ 'ಇದು ಕಳೆದ ನಾಲ್ಕೈದು

ವರ್ಷಗಳಲ್ಲಿ ನಾಲ್ಕೈದು ಬಾರಿ ಸರ್ವೆ ಆಗಿದೆ. ಸಮಾಧಾನ ಆಗಲಿಲ್ಲ. ಮತ್ತೆ ನೀವು ಕೆಟ್ಟ ಹೆಸರು ತೆಗೆದುಕೊಳ್ಳಬೇಕೆನ್ನುವುದಿದ್ದರೆ, ಏನೋ ಉತ್ಸಾಹದಲ್ಲಿ ಮಂತ್ರಿಗಳಾದ ಮೇಲೆ ಸರ್ವೇ ಮಾಡುವುದಕ್ಕೆ ಹೋಗಿದ್ದೀರಿ. ನೀವೇನು ಇವತ್ತು ಈ ಸಮೀಕ್ಷೆಗೆ condition ಹಾಕಿದ್ದೀರಾ ಇದು ನಮಗೆ ತೃಪ್ತಿ ಇಲ್ಲ. ಬಡವರಿಗೆ ಅನ್ಯಾಯವಾಗುತ್ತದೆ. ಮತ್ತೊಮ್ಮೆ ಸಮೀಕ್ಷೆ ಮಾಡುವಂಥ ಪರಿಸ್ಥಿತಿ ನಿಮಗೆ ಬರುತ್ತದೆ. ನೀವಿಬ್ಬರೂ ಮಿಟಿಂಗ್ ಮಾಡಿಕೊಂಡು ನಾವೇನು ಸಲಹೆಗಳನ್ನು ಕೊಟ್ಟಿದ್ದೇವೆ, ಅದರ ಪ್ರಕಾರ ಈ condition ಅನ್ನು relax ಮಾಡಿ ನೀವು ಮಾಡಬೇಕು. ಇಲ್ಲದಿದ್ದರೆ ಇದರಿಂದ ಈ ರಾಜ್ಯದ ಬಡವರಿಗೆ ನ್ಯಾಯ ಸಿಗುವುದಿಲ್ಲವೆಂದು ಹೇಳಿ ನಿಮ್ಮ ನೀತಿಯನ್ನು ಖಂಡಿಸಿ ಪ್ರತಿಭಟನೆ ಮಾಡಿ ನಾವು ವಾಕ್‌ಔಟ್ ಮಾಡಿ ಹೊರಗಡೆ ಹೋಗುತ್ತೇವೆ. ಅದು ಬಿಟ್ಟು ನಾವು ಏನೂ ಮಾಡುವುದಕ್ಕಾಗುವುದಿಲ್ಲ.

(ವಿರೋಧ ಪಕ್ಷವಾದ ಬಿ.ಜೆ.ಪಿ.ಯ ಮಾನ್ಯ ಸದಸ್ಯರುಗಳೆಲ್ಲಾ ಸಭಾತ್ಯಾಗ ಮಾಡಿದರು)

ಶ್ರೀ ಎಚ್. ಎಸ್. ಮಹದೇವ ಪ್ರಸಾದ್:– ಮಾನ್ಯ ಅಧ್ಯಕ್ಷರೆ, ಇನ್ನು ಎರಡು ನಿಮಿಷದಲ್ಲಿ ಕೆಲವು ವಿಚಾರಗಳನ್ನು ಹೇಳಿಬಿಡುತ್ತೇನೆ. ಮಾನ್ಯ ಹಿರಿಯ ಸದಸ್ಯರಾದಂಥ ಕೃಷ್ಣಪ್ಪನವರು ಮಾತನಾಡುತ್ತಾ– ನಗರ ಪ್ರದೇಶಗಳಲ್ಲಿ ನಾವು ಅನುಸರಿಸುವ ಮಾನದಂಡಗಳ ಬಗ್ಗೆ ಕೇಳಿದ್ದಾರೆ. ತಮ್ಮ ಮುಖಾಂತರ ನಗರ ಪ್ರದೇಶದಲ್ಲಿ ಕೂಡ ಆಯಾ ವಾರ್ಡ್ ಮಟ್ಟದಲ್ಲಿ ಒಂದೊಂದು ಸಮಿತಿಯನ್ನು ಈಗಾಗಲೇ ರಚನೆ ಮಾಡಿದ್ದೇವೆ. ಇದಕ್ಕೆ ನಗರಪಾಲಿಕೆಯ ಆಯುಕ್ತರು ಮುಖ್ಯಸ್ಥರಾಗಿರುತ್ತಾರೆ. ಇದರ ಒಂದು ಗೈಡ್‌ಲೈನ್ ಕಾಫಿಯನ್ನು ಸಹ ನಗರ ಪ್ರದೇಶದ ಎಲ್ಲ ಶಾಸಕರುಗಳಿಗೆ ಕಳುಹಿಸಿಕೊಡುತ್ತಿದ್ದೇನೆ ಮತ್ತು ಬೆಂಗಳೂರು ನಗರಕ್ಕೆ ಸಂಬಂಧಪಟ್ಟಂತೆ ಎಲ್ಲಾ ಶಾಸಕರ ಸಭೆಯನ್ನು ಈ ಸದನ ಮುಗಿಯುವುದರೊಳಗೆ ಕರೆದು ಈ ನಗರ ಪ್ರದೇಶದಲ್ಲಿ ಯಾವ ರೀತಿ ಸಮೀಕ್ಷೆಯನ್ನು ಅಳವಡಿಸಿಕೊಳ್ಳಬೇಕೆನ್ನುವುದರ ಬಗ್ಗೆ ಅವರ ಸಲಹೆಯನ್ನು ಪಡೆದು ಆ ರೀತಿಯಲ್ಲಿ ಅದನ್ನು ಮಾಡುತ್ತೇನೆ. ಈಗ ಸಧ್ಯಕ್ಕೆ ಏನಿದೆ ಎನ್ನುವುದರ ಬಗ್ಗೆ ಬೇಕಾದರೆ ಹೇಳುತ್ತೇನೆ. ಇಲ್ಲವೆಂದರೆ ಮಿಟಿಂಗ್‌ನಲ್ಲಿಯೇ ಅವರಿಗೆ ತಿಳಿಸಿಕೊಡುತ್ತೇನೆ.

ಶ್ರೀ ಡಿ. ಸಿ. ತಮ್ಮಣ್ಣ (ಮದ್ದೂರು):– ಮಾನ್ಯ ಅಧ್ಯಕ್ಷರೆ, ನಾನು ಈ ಪಡಿತರ ಬಗ್ಗೆ ಒಂದು ಸಲಹೆಯನ್ನು ಕೊಡುವುದಕ್ಕೆ ಬಯಸುತ್ತೇನೆ. ನಾವು ಕ್ಷೇತ್ರಗಳಿಗೆ ಭೇಟಿ ಕೊಟ್ಟ ಸಂದರ್ಭದಲ್ಲಿ ಈ ಪಡಿತರ ಚೀಟಿ ಬಗ್ಗೆ ಅನೇಕ ನ್ಯೂನತೆಗಳು ಕಂಡುಬಂದಿವೆ. ಒಂದೇ ಕುಟುಂಬದಲ್ಲಿ 4,5,6 ಕಾರ್ಡುಗಳು ಇರುವುದನ್ನು ನಾವು ನೋಡಿದ್ದೇವೆ. ಒಂದೇ ಕುಟುಂಬದಲ್ಲಿ ಗಂಡ ಹೆಂಡತಿಗೆ ಒಂದು ಕಾರ್ಡು. ಮಕ್ಕಳು ವಯಸ್ಸಿಗೆ ಬಂದವರಿದ್ದರೆ ಅವರು ಆ ಕುಟುಂಬದಿಂದ ಬೇರೆ ಆಗದಿದ್ದರೂ ಕೂಡ ಅವರಿಗೂ ಒಂದೊಂದು ಕಾರ್ಡು ಇದೆ ಅಥವಾ ಯಾರಾದರೂ ಹೆಣ್ಣುಮಕ್ಕಳು ಮದುವೆಯಾದವರು ವಾಪಸ್ಸು ಬಂದಿದ್ದರೆ 'ಅವರು ಮನೆ ಬಿಟ್ಟು ಬಂದಿದ್ದಾರೆ, ಅವರಿಗೂ ಒಂದು ಕಾರ್ಡು ಕೊಡಬೇಕೆಂದು ಕೇಳಿ' ಅವರಿಗೂ ಸಹ ಒಂದು ಕಾರ್ಡು ಇರುತ್ತದೆ. ಈ ತರಹದಲ್ಲಿ ಒಂದೇ ಕುಟುಂಬದಲ್ಲಿ ಐದಾರು ಕಾರ್ಡುಗಳಿರುವಂಥದ್ದನ್ನು

ನಾವು ಕ್ಷೇತ್ರದಲ್ಲಿ ನೋಡಿದ್ದೇವೆ. ಒಂದು ಕುಟುಂಬ ಅಂದರೆ ಗಂಡ ಹೆಂಡತಿ ಮಕ್ಕಳು ಎಷ್ಟು ಜನ ಇರಬೇಕೆಂಬುದನ್ನು ಫಿಕ್ಸ್ ಮಾಡಬೇಕು. ಅದರಲ್ಲಿ ಗಂಡ ಹೆಂಡತಿ ಇಬ್ಬರೇ ಇದ್ದರೆ, ಮದುವೆಯಾದವರು ವಯಸ್ಕರು ಒಂದು ಕುಟುಂಬದಲ್ಲಿ ಇರುತ್ತಾರೆ. ಅಥವಾ ಅವನೇನಾದರೂ ಕಾನೂನು ರೀತಿಯಾಗಿ ಆ ಕುಟುಂಬದಿಂದ ಬೇರ್ಪಟ್ಟು ಹೋಗಿದ್ದರೆ ಅಥವಾ ಗಂಡ ಹೆಂಡತಿ ಇಬ್ಬರೇ ಇದ್ದರೆ ಪಡಿತರ ಚೀಟಿಯಲ್ಲಿ ಕೊಡಬೇಕಾದಂಥ 20 ಕೆಜಿ ಅಕ್ಕಿಯನ್ನು ಕಡಿಮೆ ಮಾಡಿ 10 ಕೆ.ಜಿ. ಕೊಡುವಂಥದ್ದನ್ನು ಕೂಡ ಮಾಡಬಹುದು. ಒಂದು ಕುಟುಂಬ ಎಂದು ಗಂಡ ಹೆಂಡತಿ ಮಾತ್ರ ಇರುವವರಿಗೂ 20 ಕೆ.ಜಿ. ಅಕ್ಕಿ ಕೊಡುವಂಥದ್ದು ಉಳಿದ ಆಹಾರ ಪದಾರ್ಥಗಳನ್ನು ಕೊಡುವಂಥದ್ದು ಇದನ್ನು ಕಡಿತ ಮಾಡಿದರೆ ಇನ್ನೂ ಹೆಚ್ಚು ಜನ ಬಡವರಿಗೆ ಪಡಿತರ ಚೀಟಿಯನ್ನು ಕೊಡುವಂಥ ಅವಕಾಶಸಿಗುತ್ತದೆ. ಈ ಅವಕಾಶವನ್ನು ಉಪಯೋಗಿಸಿಕೊಂಡು ಕುಟುಂಬದ ಸಂಖ್ಯೆಯನ್ನು ಕೂಡ ನಿಗದಿಮಾಡುವುದು ಒಳ್ಳೆಯದೆಂದು ನನ್ನ ಸಲಹೆ.

(ಅಧ್ಯಕ್ಷರ ಪೀಠವನ್ನು ಮಾನ್ಯ ಉಪಾಧ್ಯಕ್ಷರು ಅಲಂಕರಿಸಿದರು)

ಶ್ರೀ ಎಚ್. ಎಸ್. ಮಹದೇವ ಪ್ರಸಾದ್:– ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸದಸ್ಯರು ಏನು ಸಲಹೆ ಕೊಟ್ಟಿದ್ದಾರೆ ಈಗಾಗಲೇ ನಾವು ಆ ಬಗ್ಗೆ ಆಲೋಚನೆ ಮಾಡಿದ್ದೇವೆ. ಯೂನಿಟ್ ಸಿಸ್ಟಮ್ ಅಂದರೆ ಈ ಸಮೀಕ್ಷೆಯ ಸಂದರ್ಭದಲ್ಲಿ ಆ ಕುಟುಂಬದಲ್ಲಿ ಎಷ್ಟು members ಇದ್ದಾರೆ, ಆ ಮನೆಯ ಕುಟುಂಬದ ಸದಸ್ಯರ ಸಂಖ್ಯೆಗನುಗುಣವಾಗಿ ಪಡಿತರ ವಿತರಣೆ ಮಾಡತಕ್ಕಂಥ ವ್ಯವಸ್ಥೆಯನ್ನು ನಾವು ಈ ಸಮೀಕ್ಷೆ ಮುಗಿದ ನಂತರ ಅದನ್ನು ಜಾರಿಗೊಳಿಸುತ್ತೇವೆ.

ಶ್ರೀ ಎಂ. ಕೆ. ಸೋಮಶೇಖರ (ಕೃಷ್ಣರಾಜ):– ಮಾನ್ಯ ಉಪಾಧ್ಯಕ್ಷರೆ, ಆ computerized cards ಅನ್ನು issue ಮಾಡುವಾಗ ಎಲ್ಲಾ ಕುಟುಂಬದ ಮಹಿಳೆಯ ಹೆಸರಿನಲ್ಲಿ ಕಾರ್ಡುಗಳನ್ನು issue ಮಾಡುವುದು ಒಳ್ಳೆಯದು. ಅದರ ಜೊತೆಗೆ ಯಾರ ಹೆಸರಿನಲ್ಲಿ ಕಾರ್ಡುಗಳು ಇರುತ್ತದೋ ಅವರೇ ಬಂದು ಪಡಿತರ ಧಾನ್ಯಗಳನ್ನು ಕೊಂಡು ಕೊಳ್ಳುವುದನ್ನು ಮಾಡಬೇಕಾಗುತ್ತದೆ. ಏಕೆಂದರೆ ಇಲ್ಲಿ ಕಾರ್ಡುಗಳನ್ನು ತೆಗೆದುಕೊಂಡು ಹೋಗಿ ಬಡವರು ಗಿರಿವಿ ಇಟ್ಟುಕೊಳ್ಳತಕ್ಕಂಥದ್ದು, ಅಡವು ಇಟ್ಟುಕೊಳ್ಳತಕ್ಕಂಥದ್ದು. ಅಥವಾ ಡಿಪೋದವರೇ ಇಟ್ಟುಕೊಳ್ಳುವಂಥ ವ್ಯವಸ್ಥೆಗಳಿರುತ್ತವೆ. ಆ ವ್ಯಕ್ತಿಗಳೇ ಬಂದು ಪರ್‌ಚೇಸ್ ಮಾಡುವುದು, thub impression ಅಥವಾ sign ಮಾಡತಕ್ಕಂಥದ್ದು. computer ನಲ್ಲಿ thub impression ಮಾಡತಕ್ಕಂಥದ್ದನ್ನು ಅಳವಡಿಸಿಕೊಳ್ಳಬೇಕೆಂದು ನಾನು ಮಾನ್ಯ ಆಹಾರ ಮಂತ್ರಿಗಳಲ್ಲಿ ಕೋರಿಕೊಳ್ಳುತ್ತೇನೆ.

ಶ್ರೀ ಎಚ್. ಎಸ್. ಮಹದೇವ ಪ್ರಸಾದ್:– ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸದಸ್ಯರು ತಿಳಿಸಿದಂತೆ, ಆ ಒಂದು ವಿಚಾರದಲ್ಲಿ ಕೂಡ ಈಗಾಗಲೇ ಸರ್ಕಾರ ಆಲೋಚನೆ ಮಾಡಿದೆ. ನಾವು ನಮ್ಮ ಇಲಾಖೆಯನ್ನು computerization ಮಾಡಿ bar coding coupon system ಅನ್ನು ಜಾರಿಗೊಳಿಸುತ್ತೇವೆ. ಆಗ ಪ್ರತಿಯೊಬ್ಬ card holder ಕೂಡ ನ್ಯಾಯಬೆಲೆ ಅಂಗಡಿಗೆ ಆ

coupon ಅನ್ನು ಕೊಟ್ಟು ಆಹಾರ ಪದಾರ್ಥವನ್ನು ಪಡೆಯುವಂಥ ವ್ಯವಸ್ಥೆ ಜಾರಿಗೆ ಬರುತ್ತದೆ. ಅದು ಬರುವುದರಿಂದ ಈ mis-use ಆಗುವುದನ್ನು ತಡೆಗಟ್ಟುವುದಕ್ಕೆ ಅವಕಾಶವಾಗುತ್ತದೆ.

(ಆ) ವಿಷಯ :– ಪಿ. ಹೆಚ್. ಸಿ. ಯನ್ನು ಎನ್.ಜಿ.ಓ.ಗೆ ವಹಿಸಿರುವುದರಿಂದ ತೊಂದರೆ ಯಾಗಿರುವುದರ ಬಗ್ಗೆ.

ಶ್ರೀ ಜೆ. ಸಿ. ಮಾಧುಸ್ವಾಮಿ:– ಮಾನ್ಯ ಉಪಾಧ್ಯಕ್ಷರೆ, ಆರೋಗ್ಯ ಇಲಾಖೆಗೆ ಸಂಬಂಧಿಸಿದಂತೆ ನಾನು ಒಂದು ಪ್ರಶ್ನೆಯನ್ನು ಕೇಳಿದ್ದು ಅದಕ್ಕೆ ಸಂಬಂಧಿಸಿದಂತೆ ಮಾನ್ಯ ಆರೋಗ್ಯ ಸಚಿವರು ಒಂದು ಹೇಳಿಕೆಯನ್ನು ಕೊಡಬೇಕಾಗಿದೆ. ಅವರು ಈಗ ಸದನದಲ್ಲಿರುವುದರಿಂದ ದಯಮಾಡಿ ಉತ್ತರ ಕೊಡಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎನ್. ಚಲುವರಾಯಸ್ವಾಮಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):– ಮಾನ್ಯ ಉಪಾಧ್ಯಕ್ಷರೆ, ಆವತ್ತು ಶ್ರೀ ಮಾಧುಸ್ವಾಮಿಯವರು ಅವರ ಕ್ಷೇತ್ರದಲ್ಲಿ ಒಂದು P.H.C. ಯನ್ನು N.G.O.ಗೆ ವಹಿಸಿರುವುದರ ಬಗ್ಗೆ ಹಾಗೂ ಅವರು ಸರಿಯಾದ ರೀತಿಯಲ್ಲಿ ಕೆಲಸ ಮಾಡುತ್ತಿಲ್ಲ. ಡಾಕ್ಟರುಗಳು ಇಲ್ಲಿ, ಅಲ್ಲಿ staff ಇಲ್ಲ, ಇದರಿಂದ ಸಾರ್ವನಿಕರಿಗೆ ತೊಂದರೆಯಾಗುತ್ತದೆ ಎಂದು ಸಭೆಯ ಗಮನಕ್ಕೆ ತಂದಿದ್ದರು. ನಾನು ಆವತ್ತು ಸದನದಲ್ಲಿ ಇಲ್ಲದಿದ್ದುದರಿಂದ ಸಂಬಂಧಪಟ್ಟ ಸಚಿವರು ಬಂದ ಮೇಲೆ ಅವರಿಂದ ಉತ್ತರ ಕೊಡಿಸುತ್ತೇನೆಂದು ಮಾನ್ಯ ಅಧ್ಯಕ್ಷರು ಹೇಳಿದ್ದರಂತೆ. ಆದ್ದರಿಂದ ಆ ಬಗ್ಗೆ ನಾಳೆ ವರದಿಯನ್ನು ತರಿಸಿಕೊಂಡು, ನಾವು ಆ ರಿತಿ N.G.O. ಗಳಿಗೆ ಕೊಡತಕ್ಕಂಥ ಉದ್ದೇಶವೇನೆಂದರೆ, ಸರ್ಕಾರಕ್ಕಿಂತ ಇನ್ನು ಹೆಚ್ಚಿನ ಸೇವೆಯನ್ನು ಜನರಿಗೆ ಕೊಡುವ ಉದ್ದೇಶ ಇದ್ದರೆ ಮಾತ್ರ ಅವರಿಗೆ ವಹಿಸತಕ್ಕಂಥ ತೀರ್ಮಾನವಾಗಿರುವಂಥದ್ದು. ಅದು ತಾವು ಹೇಳಿದಂತೆ ಆ ರೀತಿ ಇದ್ದರೆ ಅದನ್ನು ವಾಪಸ್ಸು ತೆಗೆದುಕೊಂಡು ನಾವು ಸರ್ಕಾರದಿಂದ ಸರಿಯಾದ ವ್ಯವಸ್ಥೆಯನ್ನು ಮಾಡುತ್ತೇವೆ.

11. ವಿತ್ತೀಯ ಕಾರ್ಯಕಲಾಪ

2005–2006ನೇ ಸಾಲಿನ ಆಯವ್ಯಯ ಅಂದಾಜುಗಳ ಮೇಲೆ ಮುಂದುವರೆದ ಸಾಮಾನ್ಯ ಚರ್ಚೆ

ಶ್ರೀ ಬಸವರಾಜ ರಾಯರೆಡ್ಡಿ (ಯಲಬುರ್ಗಾ):– ಮಾನ್ಯ ಅಧ್ಯಕ್ಷರೆ, 2005–06ನೇ ಸಾಲಿನ ಆಯವ್ಯಯದ ಮೇಲೆ ಮಾತನಾಡಲು ನನಗೆ ಅವಕಾಶ ಮಾಡಿಕೊಟ್ಟಂಥ ತಮಗೆ ಅಭಿನಂದನೆಗಳನ್ನು ಸಲ್ಲಿಸಿ ಮಾತನಾಡಬಯಸುತ್ತೇನೆ. ಇವ್ಹೊತ್ತು ನಮ್ಮ ಮಾನ್ಯ ಧರ್ಮಸಿಂಗ್ ರವರ ನೇತೃತ್ವದಲ್ಲಿರುವ ಸರ್ಕಾರದಲ್ಲಿ ಉಪ ಮುಖ್ಯಮಂತ್ರಿಗಳಾದ ಮಾನ್ಯ ಸಿದ್ದರಾಮಯ್ಯನವರು 2005–06ನೇ ಸಾಲಿನ ಆಯವ್ಯಯವನ್ನು ಏನು ಮಂಡಿಸಿದ್ದಾರೆ ಮತ್ತು ಆ ಮೂಲಕ ರಾಜ್ಯಕ್ಕೆ ಏನು ಕೊಟ್ಟಿದ್ದಾರೆ ಈ ಒಂದು ಬಜೆಟ್ ಅತ್ಯಂತ ಜನಪರವಾದಂತಹ ಮತ್ತು ಅತ್ಯಂತ ಪ್ರಗತಿದಾಯಕವಾದಂಥ ಮತ್ತು ಎಲ್ಲಾ ಸಮುದಾಯದ ಜನಗಳಿಗೆ ಸ್ನೇಹಮಯವಾಗಿ ಒಪ್ಪಿಗೆಯನ್ನು ನೀಡುವಂಥ ಬಜೆಟ್‌ನ್ನು ಕೊಟ್ಟಿದ್ದಾರೆ. ಅದಕ್ಕಾಗಿ ನಾನು ಈ ಆಯವ್ಯಯವನ್ನು